# ಯತಿ ಪ್ರಕಾಶ

ಶ್ರೀದೇವಿ

ಯಾದವಾದ್ರಿ, ಮಂಡ್ಯ



ಪ್ರಕಾಶಕರು

ಶ್ರೀದೇವಿ ಪ್ರಕಾಶನ

# ಯತಿ ಪ್ರಕಾಶ

ಶ್ರೀದೇವಿ
ಯಾದವಾದ್ರಿ, ಮಂಡ್ಯ

ಪ್ರಕಾಶಕರು
ಶ್ರೀದೇವಿ ಪ್ರಕಾಶನ
ಮಂಡ್ಯ

1997

**YATHI PRAKASHA** (CRITICAL ANALYSIS OF YATHI'S & MATADIPATHI'S) AND PUBLISHED BY SRIDEVI PRAKASHANA 3018 100Ft ROAD NEHRU NAGAR MANDYA (KARNATAKA).

FIRST EDITION : 1997

PRICE : RS - 30/-

ಎಲ್ಲಾ ಹಕ್ಕುಗಳನ್ನು ಕಾದಿರಿಸಿರುತ್ತದೆ

ಮುದ್ರಣದ ಪ್ರತಿಗಳು : 1000

ಮುದ್ರಣ : 1997

ಬೆಲೆ : 30/-

ಪುಸ್ತಕ ದೊರೆಯುವ ಸ್ಥಳ : ಎಂ.ಎಸ್. ಶಿಂಗಾರಮ್ಮ,
ಶ್ರೀದೇವಿ ಪ್ರಕಾಶನ,
3018 ನೂರಡಿ ರಸ್ತೆ ನೆಹರುನಗರ,
ಮಂಡ್ಯ.
ದೂರವಾಣಿ ಸಂಖ್ಯೆ : 74897

ಮುದ್ರಣ : ಮಂಡ್ಯ ಕಂಪ್ಯೂಟ್. ಸೆಂಟರ್ ಮತ್ತು
ಎಸ್. ಟಿ. ಎಸ್. ಆಫ್‌ಸೆಟ್ ಪ್ರಿಂಟರ್ಸ್,
ತಾವರೆಗೆರೆ, ಮಂಡ್ಯ. ದೂರವಾಣಿ : 74638

ಶ್ರೀ

# ಈ ಕೃತಿಯ ಪರಿಚಯ


| | | ಪುಟ ಸಂಖ್ಯೆ |
|---|---|---|
| (1) | " ಸಮರ್ಪಣೆ" | |
| (2) | ಆಶೀರ್ವಚನ | 1 |
| (3) | ಸಂನ್ಯಾಸ- ಗುರು | 4 |
| (4) | ಸಂನ್ಯಾಸಿಯೇ ದೇವರು | 6 |
| (5) | ಸಂನ್ಯಾಸಿಯ ಹಿರಿಮೆ | 9 |
| (6) | ಸಂನ್ಯಾಸಿಯನ್ನು ಸತ್ಕರಿಸುವುದರ ಫಲ ಹಾಗೂ ಅಪಮಾನಪಡಿಸುವುದರ ದೋಷ | 10 |
| (7) | ಭಿಕ್ಷಾವಿಧಿ | 11 |
| (8) | ಭಿಕ್ಷೆಯ ವಿಧಿ - ವಿಧಾನ | 12 |
| (9) | ಭಿಕ್ಷಾ ನಿಷೇಧಗಳು | 12 |
| (10) | ಯತಿಪೂಜೆ | 13 |
| (11) | ಮಂಡಲಮ್ | 13 |
| (12) | ಹಸ್ತೋದಕ | 14 |
| (13) | ಭಿಕ್ಷೆಯ ಅನಂತರ ಮಾಡಬೇಕಾದ ವಿಧಿಗಳು | 14 |
| (14) | ಅಪಚಾರಗಳು | 15 |
| (15) | ಮಠಾಧಿಪತಿಗಳು | 17 |
| (16) | ಆಚಾರ್ಯಪುರುಷರು | 17 |
| (17) | ಶ್ರೀ ವೈಷ್ಣವರು | 19 |
| (18) | ಶರೀರ ಸಂತಾನವೆಂದರೆ | 19 |

(19) ಕುಲಕ್ರಮಾಗತ ಆಚಾರ್ಯರು 20

(20) ಆಶ್ರಮ ಪರಂಪರೆ ಅಥವಾ ಮಠಪರಂಪರೆ 23

(21) ಓ ಚತುರ್ಮಾಸ! 26

(22) ಪರಾಶರ ಸಂಹಿತಾಯಾಂ 26

(23) ಶೇಷ ಸಂಹಿತಾಯಾಂ 28

(24) ದ್ವಾದಶೋರ್ಧ್ವಪುಂಡ್ರ 30

(25) ಸಮಾಶ್ರಯಣ 33

(26) ಸ್ಮೃತಿಯಲ್ಲಿರುವ ಅಷ್ಟಾಕ್ಷರ ಮಹಿಮೆ 40

(27) ದ್ವಯಮಂತ್ರದ ಹಿರಿಮೆ 42

(28) ಆಚಮನದಲ್ಲಿ ದ್ವಾದಶನಾಮಗಳು 45

(29) ಮಠಾಧಿಪತಿಗಳು ಮತ್ತು ಸನ್ಯಾಸಿಗಳ ಪರಂಪರೆ 48

ಶ್ರೀಃ

# ಸಮರ್ಪಣೆ

*''ಆಚಾರ್ಯಃ ಸಾಕ್ಷಾತ್ ಹರಿಃ*
*ಚರರೂಪೀನ ಸಂಶಯಃ''*

ಭಾರತದ ಸನಾತನ ಹಿಂದೂ ಧರ್ಮದಲ್ಲಿ, ಋಷಿಮುನಿಗಳು ಗುರು, ಆಚಾರ್ಯರು, ಮಠಾಧಿಪತಿಗಳು ಮತ್ತು ಸಂನ್ಯಾಸಿಗಳು ಭಗವಂತನ ಅವತಾರದಂತೆ ಜನಗಳಿಗೆ ಧರ್ಮ, ಸಂಸ್ಕೃತಿ ಆಚಾರ-ವಿಚಾರ, ರೀತಿ-ನೀತಿಗಳನ್ನು ಉಪದೇಶ ಮಾಡುತ್ತಿದ್ದಾರೆ.

ಆದ್ದರಿಂದ ಸಮಾಜದಲ್ಲಿ, ಈ ಮೇಲ್ಕಂಡ ಮಹನೀಯರಿಗೆ ರಾಜನಿಂದ ರಂಕನವರೆಗೂ ಗೌರವಿಸುತ್ತಿದ್ದಾರೆ. ಜ್ಞಾನಾರ್ಜನೆಗೂ ಧರ್ಮಸಂರಕ್ಷಣೆಗೂ, ಆಚಾರ್ಯರುಗಳೇ ಮುಖ್ಯರಾದವರು.

ಮಠಾಧಿಪತಿಗಳು ಮತ್ತು ಸಂನ್ಯಾಸಿಗಳು ಪ್ರತಿ ಒಂದು ಧಾರ್ಮಿಕ ಕ್ಷೇತ್ರದಲ್ಲಿ ಮುಖ್ಯಸ್ಥರಾಗಿರುತ್ತಾರೆ. ಸಂನ್ಯಾಸಿಗಳಿಗೆ ಭಗವಂತನಿಗೆ ನೀಡುವ ಭಕ್ತಿ, ಶ್ರದ್ಧೆ ಮತ್ತು ಗೌರವವನ್ನು ನೀಡಬೇಕು. ಭಗವಂತನಿಗೂ ನಮಗೂ ಸಂಬಂಧವನ್ನುಂಟು ಮಾಡುವವನೇ ಆಚಾರ್ಯನೆಂಬ ಗುರುವು!

ಈ "ಯತಿಪ್ರಕಾಶ" ಎಂಬ ಕೃತಿಯನ್ನು ವೀಕ್ಷಿಸಿ ಲೋಪ-ದೋಷಗಳನ್ನು ಸರಿಪಡಿಸಿಕೊಟ್ಟಂತಹ ಮಹಾನುಭಾವರೂ ಸಹ ಪ್ರಸಿದ್ಧ ಯತಿವರ್ಯರೇ ಆಗಿದ್ದಾರೆ. ಶ್ರೀ ಶ್ರೀ ಶ್ರೀ ಶ್ರೀರಂಗ ಶ್ರೀಪಾದಸ್ವಾಮಿಗಳು ತಮ್ಮ ಹಿರಿಮೆಗೆ ಅನುಸಾರವಾಗಿ ಆಶೀರ್ವಚನವನ್ನು ಬರೆದು ನನ್ನನ್ನು ಒಬ್ಬ ವ್ಯಕ್ತಿ ಎಂದು ಪರಿಗಣಿಸಿರುತ್ತಾರೆ. ಅವರ ಆಶೀರ್ವಾದದಿಂದ ಈ ಕಿರಿಹೊತ್ತಿಗೆಯನ್ನು ಹೊರತರಲು ಪ್ರಯತ್ನಿಸುತ್ತಿದ್ದೇನೆ. ವಿದ್ವಜ್ಜನರು ತಿಳುವಳಿಕೆ ಇಲ್ಲದೆ ನಾನು ಮಾಡಿರುವ ತಪ್ಪುಗಳನ್ನು ಕ್ಷಮಿಸಿ 'ನೀರಕ್ಷೀರ'ನ್ಯಾಯದಂತೆ ಶ್ರೇಷ್ಠ ವಿಚಾರಗಳನ್ನು ಮಾತ್ರ ಪರಿಗ್ರಹಿಸಬೇಕೆಂದು ಕೋರುತ್ತೇನೆ.

ಮತ್ತೊಮ್ಮೆ, ಶ್ರೀ ಪರಮಹಂಸ ಪರಿವ್ರಾಜಕಾಚಾರ್ಯರಾದ ವರದ ದೇಶಿಕೇಂದ್ರ, ಸ್ವಾಮಿಯವರ ಚರಣಾರವಿಂದದಲ್ಲಿ ವಿನಯದಿಂದ ಪ್ರಣಾಮವನ್ನು ಮಾಡುತ್ತೇನೆ.

ಆಚಾರ್ಯರುಗಳ ದಿವ್ಯ ಸನ್ನಿಧಿಯಲ್ಲಿ ಪ್ರಣಾಮಗಳು.

ಶ್ರೀದೇವಿ.

ಶ್ರೀಮತೇ ರಾಮಾನುಜಾಯ ನಮಃ

ಶ್ರೀರಂಗ ಸದ್ಗುರು ಮಹಾ ಯೋಗಿನ್ ನಮಃ

# ಆಶೀರ್ವಚನ

ವಿದ್ಯಾವಿನಯ ಸಂಪನ್ನರೂ ಭಗವದ್ಭಾಗವತ ಸೇವಾ ಪರಿಪೂತ ಜೀವಿತರೂ ಆಗಿರುವ ಶ್ರೀಮತಿ ಶಿಂಗಾರಮ್ಮ ಶ್ರೀ ದೇವಿಯವರು ಶ್ರೀಯಃ ಪತಿಯ ಭಕ್ತರಿಗೆ ಸಮರ್ಪಿಸಿರುವ ಈ ಶ್ರೀ ಕೋಶವನ್ನು ಕುರಿತು ಸಂತೋಷದಿಂದ ನಾರಾಯಣ ಸ್ಮರಣೆ ಮಾಡುತ್ತೇವೆ. ಈ ಧನ್ಯಾತ್ಮರಿಗೆ ನಾನಾ ವಿದ್ಯಾ ಸಂಸ್ಥೆಗಳೂ ಶಾಸನಸತ್ತೆಯೂ ಸಾಮಾಜಿಕ ಸಂಘಗಳೂ ಮತ್ತು ಎಲ್ಲಕ್ಕೂ ಮೂರ್ಧನ್ಯರಾಗಿ ಶ್ರೀಮದಾಚಾರ್ಯ ಪೀಠಗಳೂ ಪ್ರಶಸ್ತಿ ಗೌರವ ಅನುಗ್ರಹ ಆಶೀರ್ವಾದಗಳ ಸುರಿಮಾಲೆಯನ್ನು ಕೊಟ್ಟು ಸಂಭಾವನೆಯನ್ನು ಸಲ್ಲಿಸಿವೆ. ಸತ್ಪಾತ್ರರಿಗೆ ಮಾಡಿದ ಸಂಭಾವನೆಯು ಸಂಭಾವಕರಿಗೂ ಸಂಭಾವಿತರಿಗೂ ಇಬ್ಬರಿಗೂ ಕೀರ್ತಿಯನ್ನು ತಂದು ಕೊಡುತ್ತದೆಯೆಂಬುದರಲ್ಲಿ ಸಂದೇಹವಿಲ್ಲ.

ಶ್ರೀಮತಿ ಶ್ರೀ ದೇವಿಯವರು ನಮ್ಮ ಧರ್ಮ ಮತ್ತು ಸಂಸ್ಕೃತಿ ಸಾಹಿತ್ಯಗಳಿಗೆ ಸಂಬಂಧಪಟ್ಟ ನಾನಾ ವಿಷಯಗಳನ್ನು ಕುರಿತು ಕನ್ನಡ ಮತ್ತು ಹಿಂದೀ ಭಾಷಾ ಸರಸ್ವತಿಗಳ ಮೂಲಕ ಅದ್ಭುತವಾದ ಸೇವೆ ಸಲ್ಲಿಸಿದ್ದಾರೆ. ಪ್ರಕೃತ ಗ್ರಂಥವು ಶ್ರೀ ವೈಷ್ಣವ ಸಮಾಜಕ್ಕೆ ಇವರು ಸಮರ್ಪಣೆ ಮಾಡಿರುವ ಅಮೂಲ್ಯವಾದ ಕಾಣಿಕೆಯಾಗಿದೆ. ಆಚಾರ್ಯರ ಚರಣಾರವಿಂದಗಳಲ್ಲಿ ಕುರಿತು ತಾವು ಮಾಡಿದ್ದ ಕಾಲಕ್ಷೇಪ ಮತ್ತು ಇತರ ಗ್ರಂಥಾಧ್ಯಯನ ಅನುಷ್ಠಾನಗಳನ್ನು ಅವಲಂಬಿಸಿ ಈ ಕೃತಿ ರತ್ನವನ್ನು ಇವರು ರಚಿಸಿದ್ದಾರೆ.

ಶ್ರೀಮನ್ನಾಥ ಮುನಿಗಳಿಂದ ಪ್ರಾರಂಭವಾಗಿ ಶ್ರೀ ಪರಿಪುಷ್ಟಿಗೊಂಡು ಶ್ರೀ ಭಗವದ್ರಾಮಾನುಜರ ಮತ್ತು ಅವರ ಶಿಷ್ಯೋತ್ತಮರ ಪರಂಪರೆಯಿಂದ ಸುರಕ್ಷಿತವಾಗಿರುವ ವಿಶಿಷ್ಟಾದ್ವೈತ ದರ್ಶನ ಮತ್ತು ಆಳ್ವಾರುಗಳಿಂದಲೂ ಆಚಾರ್ಯರಿಂದಲೂ ಅನುಷ್ಠಾನ ಅನುಭವಗಳ ಮೂಲಕ ಅನುಗ್ರಹಿಸಲ್ಪಟ್ಟ ಶ್ರೀ ವೈಷ್ಣವ ಮತ ಧರ್ಮಗಳಿಗೆ ಸಂಬಂಧಪಟ್ಟ ಪಂಚ ಸಂಸ್ಕಾರಗಳು, ಆ ಕರ್ಮ ಪರಂಪರೆ ಮತ್ತು ಯತಿಧರ್ಮಗಳೇ ಮುಂತಾದ ಅತಿ ಮುಖ್ಯವಾದ ವಿಷಯಗಳನ್ನು ಅಧಿಕರಿಸಿ ಸಂಕ್ಷಿಪ್ತವೂ ಸುಂದರವೂ ಆದ ವಿವರಣೆ ವ್ಯಾಖ್ಯಾನಗಳನ್ನು ಇಲ್ಲಿ ನೋಡುತ್ತೇವೆ. ಅವುಗಳಿಗೆ ಅಂಗವಾದ ಕಾಲ, ಮಂತ್ರ, ದಾಸನಾಮ

ಮತ್ತು ಯೋಗಗಳ ಸ್ವರೂಪ ಮತ್ತು ಪ್ರಾಮುಖ್ಯಗಳ ವಿಷಯವಾಗಿ ಶಾಸ್ತ್ರ ವಾಕ್ಯ ಸಂಪ್ರದಾಯಗಳನ್ನು ಆಧರಿಸಿದ ಪ್ರಾಮಾಣಿಕರಿಂದ ಅಭಿಪ್ರಾಯಗಳು ಇಲ್ಲಿ ಮಂಡಿಸಲ್ಪಟ್ಟಿತು. ಯತಿಗಳ ಸ್ವರೂಪ ರೂಪ ಒಳಲಕ್ಷಣ, ಹೊರ ಲಕ್ಷಣಗಳನ್ನು ಕುರಿತ ವಿವರಣೆಯೂ ಇದೇ ಗುಣಮಟ್ಟದಿಂದ ಅಲಂಕೃತವಾಗಿದೆ. ವೇದೋಪನಿಷತ್ತು ಆಗಮ ಇತಿಹಾಸ ಪುರಾಣ ದಿವ್ಯ ಪ್ರಬಂಧ ಮತ್ತು ಆಚಾರ್ಯ ಶ್ರೀ ಸೂಕ್ತಿ- ಇವೆಲ್ಲವೂ ಅಧಿಕೃತ ವಿಷಯಕ್ಕೆ ಪುಷ್ಟಿ ನೀಡುವಂತೆ ತಕ್ಕ ಸ್ಥಾನಗಳಲ್ಲಿ ಅಳವಡಿಸಲ್ಪಟ್ಟಿವೆ. ಜೊತೆಯಲ್ಲಿ ಮುದ್ರಿಸಲ್ಪಟ್ಟಿರುವ ಸೂತ್ರಗಳ ಚಿತ್ರಗಳೂ ವಿಷಯ ಗ್ರಹಣಕ್ಕೆ ಸಹಾಯಕವಾಗಿವೆ.

ಶ್ರೀ ವೈಷ್ಣವ ಧರ್ಮದಲ್ಲಿ ತೆಂಕಲೈ ವಡಕಲೈ ಎಂಬ ಎರಡು ಪಂಗಡಗಳು ಬೆಳಗುತ್ತಿವೆ. ಇವುಗಳಿಗೆ ಅನ್ವಯ ಆಚಾರ ಮತ್ತು ಅಭಿಪ್ರಾಯಗಳಲ್ಲಿ ಕೆಲವು ಸಣ್ಣ ಪುಟ್ಟ ವ್ಯತ್ಯಾಸಗಳಿದ್ದರೂ ಮೌಲಿಕವಾಗಿ ಇದು ಒಂದೇ ಸಿದ್ಧಾಂತದ ಪ್ರಕಾರಗಳು. ಎರಡಕ್ಕೂ ಪ್ರಾಮಾಣಿಕತೆ, ಪ್ರಾಚೀನತೆ ಮತ್ತು ಪರಮಾರ್ಥವನ್ನು ಹೊಂದಿಸುವ ಸಾಮರ್ಥ್ಯಗಳು ಒಂದೇ ಸಮನಾಗಿವೆ. ಉಭಯ ವೇದಾಂತಗಳ ಅಭಿಪ್ರಾಯದ ಮೇಲೆ ಈ ಎರಡು ಸಿದ್ಧಾಂತಗಳು ಏಕ ರೀತಿಯಾಗಿ ಮಾನ್ಯವಾಗಿವೆ- ಎಂಬ ವಿಶಿಷ್ಟವಾದ ಅಭಿಪ್ರಾಯವನ್ನು ರಹಸ್ಯವಾಗಿಯೂ, ಸದಸ್ಯವಾಗಿಯೂ ನಾವು ಸಾರುತ್ತ ಬಂದಿದ್ದೇವೆ. " ಭಗವದ್ರಾಮಾನುಜಾಚಾರ್ಯರ ಶ್ರೀಪಾದಗಳನ್ನು ಆಶ್ರಯಿಸಿದವರಲ್ಲಿ ಶಾಸ್ತ್ರ ವಾಕ್ಯಗಳ ಯೋಜನಾ ಭೇದವೇ ಹೊರತು ಮತಭೇದವಿಲ್ಲ" ಎಂಬ ಶ್ರೀ ಮಹಾದಾಚಾರ್ಯರ ಶ್ರೀ ವಾಣಿಯನ್ನು ಇಲ್ಲಿ ಸ್ಮರಿಸುತ್ತೇವೆ.

ಶ್ರೀಮತಿ ಶಿಂಗಾರಮ್ಮ ಶ್ರೀ ದೇವಿಯವರ ಈ ಕೃತಿಯು ಸಜ್ಜನರ ಕೈದೀವಿಗೆಯಾಗಿ ಸಮಾಜದಲ್ಲಿ ಮಾನ್ಯತೆ ಪಡೆಯಲೆಂದು ಶ್ರೀಮದಾಚಾರ್ಯ ಶ್ರೀ ಪಾದುಕೆಗಳನ್ನು ಪ್ರಾರ್ಥಿಸುತ್ತೇವೆ.

" ರಾಮಾನುಜಾರ್ಯ ದಿವ್ಯಾಜ್ಞಾ
ವರ್ಧತಾ ಮಭಿವರ್ಧತಾಂ"

ಶ್ರೀ ಶ್ರೀರಂಗ ಪ್ರಿಯ ಶ್ರೀಪಾದ ಶ್ರೀ ಶ್ರೀಃ

ಮಾಘ ಶುದ್ಧ ಷಷ್ಠಿ
ಬೆಂಗಳೂರು
13-2-1997

# ಯತಿ ಪ್ರಕಾಶ

ಭಗವದ್ ಭಾಗವತರನ್ನು ನಾವು ಶಿಲಾರೂಪದಲ್ಲಾಗಲೀ ಅಥವಾ ಚಿತ್ರಪಟಗಳ ರೂಪದಲ್ಲಾಗಲೀ ಆರಾಧಿಸಿ ಪೂಜಿಸುತ್ತೇವೆ. ದೇವಾಲಯಗಳಲ್ಲಿ ನಾವು ಅದನ್ನು ಭಗವಂತನೆಂದು ಪೂಜಿಸುತ್ತೇವೆ. ಆದರೆ ನಾಸ್ತಿಕನಿಗೆ ಇವರಲ್ಲಿ ಆಸಕ್ತಿ ಇಲ್ಲ. ಹೀಗೆ ಭಗವದಾರಾಧನೆಯಲ್ಲೇ ಮಗ್ನನಾಗಿರುವವನು, ತ್ಯಾಗಿ, ಸಂನ್ಯಾಸಿ ಮನುಷ್ಯನು ದೈವವಾಗುತ್ತಾನೆ.

*"ನರೋ ನಾರಾಯಣೋ ಭವೇತ್"*

ಪ್ರತಿಮೆಗಳನ್ನು ಪೂಜೆ-ಆರಾಧನೆಗಳಿಂದ ಹಲವಾರು ವರ್ಷ ಪೂಜಿಸಿದರೆ ಆ ಭಕ್ತನ ಭಕ್ತಿಗೆಮೆಚ್ಚಿ ಪರಮಾತ್ಮನು ಅವನಿಗೆ ಫಲವನ್ನು ನೀಡುತ್ತಾನೆ. ಮನುಷ್ಯನು ಸಂಸ್ಕಾರ ಬಲದಿಂದಲೂ, ಗುರು ಕಟಾಕ್ಷದಿಂದಲೂ, ಮಂತ್ರ ಮಹಿಮೆಯಿಂದಲೂ, ತನ್ನ ಧ್ಯಾನ, ಯೋಗ ಸಿದ್ಧಿಯಿಂದಲೂ ಉಪರ್ಯುಕ್ತ ದೃಷ್ಟಾಂತದಿಂದ ನಾರಾಯಣನಾಗುತ್ತಾನೆ. ಆದ್ದರಿಂದಲೇ ಇವರುಗಳು ನಡೆದಾಡುವ ದೈವ ಮತ್ತು ಮಾತನ್ನಾಡುವ ದೈವವೆನ್ನುತ್ತಾರೆ.

*"ದ್ವೇ ರೂಪೇ ವಾಸುದೇವಸ್ಯ ಚಲಂ ಚಾಚಲಮೇವಚ|*
*ಚಲಂ ಸನ್ಯಾಸಿನೋ ರೂಪಂ ಅಚಲಂ ಪ್ರತಿಮಾದಿಕಂ ||*

ಎಂದು ಅತ್ರಿ ಮಹರ್ಷಿಯು ತಿಳಿಸಿರುತ್ತಾರೆ.

ವಾಸುದೇವನಿಗೆ ಎರಡು ರೂಪಗಳು. ಒಂದು ಚಲಿಸುವಂತಹುದು, ಮತ್ತೊಂದು ಪ್ರತಿಮಾ ರೂಪ-ಚಲಿಸದೆ ಇರುವುದು.

ಈ ಸಂನ್ಯಾಸಿಗಳನ್ನು ಸತ್ಕರಿಸಿ ಉಪಚರಿಸುವ ವಿಷಯದಲ್ಲಿ, ಇವರಿಗೆ ತೋರಿಸುವ ಭಕ್ತಿ ಭಾವದಿಂದ ಪಡೆಯುವ ಫಲಗಳನ್ನು, ಹಾಗೂ ಇವರುಗಳನ್ನು ಅಲಕ್ಷ್ಯ ಮಾಡಿದ್ದೇ ಆದರೆ ಉಂಟಾಗುವ ಪಾಪ ದೋಷಗಳನ್ನು ಕುರಿತು ವೇದಶಾಸ್ತ್ರಗಳು ತಿಳಿಸುವ ಅನೇಕ ಶ್ಲೋಕಗಳನ್ನು ಈ ಕಿರು ಕೃತಿಯಲ್ಲಿ ತೋರಿಸುತ್ತೇವೆ. ಇವರುಗಳ ಹಿರಿಮೆಯನ್ನು ಎಷ್ಟು ವಿವರಿಸಿದರೂ ಸ್ವಲ್ಪ ಮಾತ್ರ ಆಗುತ್ತದೆ. ಸನಾತನ ಧರ್ಮವನ್ನು ಅರಿಯಬೇಕೆನ್ನುವವರು ಇವುಗಳನ್ನು ಅವಶ್ಯವಾಗಿ ತಿಳಿದುಕೊಳ್ಳಬೇಕಾಗಿದೆ.

# ಸನ್ಯಾಸ-ಗುರು

ಬ್ರಹ್ಮಚಾರೀ ಗೃಹಸ್ಥಶ್ಚ ವಾನಪ್ರಸ್ಥೋಽಥ ಭಿಕ್ಷುಕಃ|
ಚತ್ವಾರ ಆಶ್ರಮಾ ಏತೇ ಪೃಥಗಾಚಾರಲಕ್ಷಣಾಃ||

ಬ್ರಹ್ಮಚಾರಿ, ಗೃಹಸ್ಥರು, ವಾನಪ್ರಸ್ಥರು ಮತ್ತು ಸನ್ಯಾಸಿ ಎಂಬ ನಾಲ್ಕು ಬೇರೆ ಬೇರೆಯಾದ ಲಕ್ಷಣಗಳುಳ್ಳ ಆಶ್ರಮಗಳಿರುತ್ತವೆ. ಇವುಗಳಲ್ಲಿ ಮೊದಲಿನ ಇಬ್ಬರು ಪ್ರವೃತ್ತಿಮಾರ್ಗಿಗಳು. ವಾನಪ್ರಸ್ಥ ಸನ್ಯಾಸಗಳು ನಿವೃತ್ತಿ ಮಾರ್ಗಗಳು. ಈ ರೀತಿ ಆಶ್ರಮಗಳನ್ನು 4 ಭಾಗಗಳಾಗಿ ವಿಂಗಡಿಸಿರುತ್ತಾರೆ.

ಸೃಷ್ಟಿ, ಸ್ಥಿತಿ ಲಯಗಳಿಗೆ ಕರ್ತಾ ಸರ್ವೇಶ್ವರನಾದ್ದರಿಂದ ಈಶ್ವರನನ್ನು ಭಕ್ತಿಯಿಂದ ಆರಾಧಿಸುವುದು. ಈ ಭಕ್ತಿಯಿಂದಲೇ ಮೋಕ್ಷಕ್ಕೆ ಕಾರಣವಾದ ಜ್ಞಾನವುಂಟಾಗುತ್ತದೆ. ಈ ಭಕ್ತಿಯು ವೇದ ಕಾಲದಿಂದಲೇ ಬರುತ್ತಿದ್ದು, ವೇದಗಳಲ್ಲಿ ತಿಳಿಸಿರುವುದು ನಮ್ಮ ಸನಾತನ ಧರ್ಮ. ವೇದವು ಅಪೌರುಷೇಯವಾದ್ದರಿಂದ ಅದರಲ್ಲಿ ತಿಳಿಸಿರುವುದು ಶಾಶ್ವತವಾದ ತತ್ವಗಳು. ಒಳ್ಳೆಯ ಮೌಲ್ಯವನ್ನುಂಟು ಮಾಡುತ್ತದೆ.

ವೇದವು ಅನಾದಿ ಸ್ವಯಂ ಭಗವಂತನಿಂದ ಪ್ರಕಟಿಸಲ್ಪಟ್ಟಿದ್ದು ಎಂದು ಭಗವಂತನೇ ತಿಳಿಸಿರುತ್ತಾನೆ. ಭಗವಂತನಿಂದ ಪ್ರಕಟಿತವಾದ್ದರಿಂದ ಇದು ಪ್ರಮಾಣ. ವೇದಗಳು ಸಂದೇಹ ನಿವೃತ್ತಿಗೊಳಿಸುತ್ತವೆ. ಸ್ಮೃತಿ, ಇತಿಹಾಸ ಪುರಾಣಗಳು ತಿಳಿಸುತ್ತವೆ ಯಾರು ವೇದವನ್ನು ಒಪ್ಪುವುದಿಲ್ಲವೋ ಅವರು ಭಗವಂತನ ಆಜ್ಞೆಯನ್ನು ನಿರಾಕರಿಸಿದಂತೆಯೇ. ಸನಾತನ ಹಿಂದುಗಳ ಆದರ್ಶವೆಂದರೆ ತಮ್ಮ-ತಮ್ಮ ವರ್ಣಾಶ್ರಮ ಧರ್ಮಕ್ಕನುಸಾರವಾಗಿ ಆಚರಣೆಯನ್ನು ಇಟ್ಟುಕೊಳ್ಳಬೇಕು.

ಅದು ಯಾವುದೆಂದರೆ, ಕೈವಲ್ಯ ಪದವಿಯನ್ನಾದರೂ, ಮುಕ್ತಿಯನ್ನಾದರೂ ಪಡೆದ ಜೀವಾತ್ಮರುಗಳು ಪ್ರಪಂಚದಲ್ಲಿ ಉದ್ಧಾರವಾಗಲು ಜನ್ಮವಿಚಾರದಲ್ಲಿಯಾಗಲಿ, ಸನ್ಮಾರ್ಗದಲ್ಲಿಯಾಗಲಿ, ಸತ್ಕುಲದಲ್ಲಿ ಜನಿಸಿ ಉಚಿತವಾದ ಅನೇಕ ಮಾರ್ಗಗಳಿಂದ ಪಾಪ ಕರ್ಮವನ್ನು ಹೋಗಲಾಡಿಸಿಕೊಂಡು ಮೋಕ್ಷವನ್ನು ಪಡೆಯಲು, ಭಕ್ತಿ ಸಿದ್ಧರು ಜ್ಞಾನೋಪದೇಶ ಮಾಡಿ ಅವರುಗಳು ಉದ್ಧಾರವಾಗಲು ಸಹಾಯ ಮಾಡುತ್ತಾರೆ, ಎಂದರೆ ಈಶ್ವರಾಂಶವನ್ನು ಪಡೆದಿರುವ ಈ ಮಹಾತ್ಮರುಗಳು ಪರಮಕಾರುಣ್ಯನಿಧಿಯಾದ ಈಶ್ವರನಿಂದ ಮೊದಲೆ ತಿಳಿಸಿರುವ ಮಾರ್ಗಗಳನ್ನು ಮುಂದೆ ಇಟ್ಟು ಆತ್ಮಗಳ ಭಕ್ತ್ಯಾನುಗುಣವಾಗಿ ಫಲಗಳನ್ನು ನೀಡಲು, ಅವರ

ಕಷ್ಟಗಳನ್ನು ಪರಿಹರಿಸಲು, ಜ್ಞಾನವನ್ನು ಉಂಟು ಮಾಡಿ ಒಳ್ಳೆಯ ಮಾರ್ಗವು ಬಂದು ಬಿಡುತ್ತೆಂದೂ ಈ ಮಹಾತ್ಮರುಗಳು ಜನಿಸುತ್ತಾರೆ. ಇದಕ್ಕೆಲ್ಲಾ ಸಮಯಾಚಾರ್ಯರ ಚರಿತ್ರೆಯೇ ಉದಾಹರಣೆಯಾಗಿರುತ್ತದೆ. ಶರೀರದ ಸ್ಥಿತಿಯಲ್ಲಿ ಉಂಟಾಗಿರುವ ವೇದನೆಯ ಕಾರಣವನ್ನು ಚೆನ್ನಾಗಿ ತಿಳಿದು ಔಷಧವನ್ನು ಕೊಡುತ್ತಾನೆ ವೈದ್ಯನು. ಆದರೆ ಶರೀರದೊಂದಿಗೆ ಸೇರಿರುವ ಜೀವನ ಸ್ಥಿತಿಯನ್ನು, ಅನುಗ್ರಹದ ಸ್ಥಿತಿಯನ್ನು ಚೆನ್ನಾಗಿ ತಿಳಿದು ಪಾಪಕಾರ್ಯಗಳನ್ನು ಮಾಡುವ ತೊಂದರೆಗೆ ಉಚಿತವಾದ ಚಿಕಿತ್ಸೆಯನ್ನು ಮಾಡಿದರೆ ಫಲವುಂಟು.

*ಕಾಷಾಯಂ ಬ್ರಾಹ್ಮಣಸ್ಯೋಕ್ತಂ ನಾನ್ಯವರ್ಣಸ್ಯ ಕಸ್ಯಚಿತ್*

ಕಾಷಾಯ ವಸ್ತ್ರವನ್ನು ಕೇವಲ ಬ್ರಾಹ್ಮಣನೊಬ್ಬನು ಮಾತ್ರ ಧರಿಸಬಹುದು ಇತರರು ಧರಿಸಲು ಅಧಿಕಾರವಿಲ್ಲ.

*"ಸಂನ್ಯಾಸ ಧಾರಣಂ ಕಾರ್ಯಂ ವಿಪ್ರೈ ಸನ್ಮುಕ್ತಿ ಹೇತವೇ |*
*ಬ್ರಾಹ್ಮಣರು ಮುಕ್ತಿಗಾಗಿ ಸಂನ್ಯಾಸಾಶ್ರಮವನ್ನು ಸ್ವೀಕರಿಸಬೇಕಾಗಿದೆ.*
*"ಯತಿರೂಪೇಣ ಸರ್ವತ್ರ ವಿಷ್ಣುಃ ಪರ್ಯಟತೇ ಮಹೀಮ್ |*
*ಭಕ್ತಾನಾಮನುಕಂಪಾರ್ಥಂ ಮಹದ್ಧರ್ಮಾಭಿವೃದ್ಧಯೇ ||*

ಭಕ್ತರುಗಳಿಗೆ ದಯೆ ತೋರಿಸುವುದಕ್ಕಾಗಿಯೂ, ಮಹತ್ವವುಳ್ಳ ಧರ್ಮಗಳ ಅಭಿವೃದ್ಧಿಗಾಗಿಯೂ, ಮಹಾವಿಷ್ಣುವು ಸನ್ಯಾಸಿಯ ರೂಪದಿಂದ ಭೂಲೋಕದಲ್ಲಿ ಎಲ್ಲಾ ಕಡೆಯಲ್ಲಿಯೂ ಸಂಚರಿಸುತ್ತಾನೆ.

*"ದೇಶಿಕೇಂದ್ರಪದೋಪಾಶ್ರಯಃ ನಾಪರೋಕ್ಷಯಿತುಂ ಭವೇತ್ |*
*ಗುರುವಿನ ಉಪದೇಶವಿಲ್ಲದೆ ಅಪರೋಕ್ಷ ಜ್ಞಾನವುಂಟಾಗುವುದಿಲ್ಲವು*
*"ಕರ್ಮಭಿರ್ನೈವ ಬೋಧಃ ಪ್ರಭವತಿ ಗುರುಣಾ ವಿನಾ ದಯಾನಿಧಿನಾ ||*
*"ಆಚಾರ್ಯವಾನ್ ಪುರುಷೋ ವೇದೇತ್ಯರ್ಥಸ್ಯ ವೇದಸಿದ್ಧತ್ವಾತ್ ||*

ಕೃಪಾನಿಧಿಯಾದ ಗುರುವಿಲ್ಲದೆ ಕರ್ಮದಿಂದ ಬಿಡುಗಡೆ ಉಂಟಾಗುವುದಿಲ್ಲ. ಯಾರು ಗುರುವನ್ನು ಪಡೆದಿರುತ್ತಾರೋ ಅವರಿಗೆ ಮಾತ್ರ ಆತ್ಮಬೋಧವುಂಟು ಎನ್ನುವುದು ವೇದದ ಅಭಿಪ್ರಾಯವು.

ಶ್ರೀಮಚ್ಛ ಆಚಾರ್ಯರುಗಳೂ ಈ ರೀತಿ ತೀರ್ಮಾನಿಸುತ್ತಾರೆ. ಕರ್ಮಮಾರ್ಗದಲ್ಲಿ ಇರುವವರು ಕರ್ಮಕ್ಕೆ ಅಧಿಕಾರಿ ಆಗುತ್ತಾರೆ. ಕರ್ಮವನ್ನು ಮುಗಿಸಿ ಜ್ಞಾನಮಾರ್ಗಕ್ಕೆ ಬರುವಂತಹವನಿಗೆ ನಿವೃತ್ತಿ ಮಾರ್ಗದಲ್ಲಿರುವ ಸಂನ್ಯಾಸಿಗಳೇ ಆಶ್ರಯದಾತರು ಎಂಬುದು ನಿಶ್ಚಯ.

*"ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ |*
*ಗುರುರೇವ ದೇವಂ ಪರಬ್ರಹ್ಮ ತಸ್ಮೈ ಶ್ರೀ ಗುರವೇ ನಮಃ ||*
*"ನಾರಾಯಣಂ ಪದ್ಮಭವಂ ವಸಿಷ್ಠಂ ಶಕ್ತಿಂ ಚ ತತ್ಪುತ್ರ ಪರಾಶರಂಚ |*
*ವ್ಯಾಸಂ ಶುಕಂ ಗೌಡಪಾದಂ ಮಹಾಂತಂ ಗೋವಿಂದ ಯೋಗೀಂದ್ರಮಥಾಸ್ಯ ||*
*ಶ್ರೀ ಶಂಕರಾಚಾರ್ಯ ಮಥಾಸ್ಯ ಶಿಷ್ಯರ ಪದ್ಮಪಾದಂಚ*
*ಹಸ್ತಾಮಲಕಂಚ ಶಿಷ್ಯಂ ||*
*ತಂ ತೋಟಕಂ ವಾರ್ತಿಕಕಾರಮನ್ಯಾ*
*ತಸ್ಮದ್ಗುರೂನ್ ಸಂತತ ಮಾನತೋಸ್ಮಿ ||*

ಎಂದು ಪರಂಪರೆ ತಿಳಿಸುತ್ತದೆ. ಜಪ, ಪೂಜಾ ಅರ್ಚನಾದಿಗಳಲ್ಲಿ ಗುರುವನ್ನು ಮೊದಲು ಸ್ಮರಿಸುವುದರಿಂದ್ದ ಇವರುಗಳು ಸರ್ವಶ್ರೇಷ್ಠರು. ಈ ಆಚಾರ್ಯಕೃಪೆ ಇಲ್ಲದಿದ್ದರೆ, ಯಾವ ದೈವೀ ಕೃಪೆಯನ್ನು ಕುರಿತು ಮಾಡುವ ಕರ್ಮಗಳ ಫಲವೂ ದೊರೆಯುವುದಿಲ್ಲ.

## "ಸಂನ್ಯಾಸಿಯೇ ದೇವರು"

*"ಅಷ್ಟಾಕ್ಷರೇಣ ಮಂತ್ರೇಣ ನಮೋ ನಾರಾಯಣಾತ್ಮನಾ |*
*ನಮಸ್ಯೇ ಭಕ್ತಿ ಭಾವೇನ ವಿಷ್ಣುರೂಪೀ ಯತಿರ್ಯತಃ ||"*

ಅಷ್ಟಾಕ್ಷರವಾಗಿರುವ "ಓಂ ನಮೋನಾರಾಯಣಾಯ" ಎನ್ನುವ ಮಂತ್ರದಿಂದ ಯಾವ ನಾರಾಯಣನು ಭಕ್ತಿ ಪೂರ್ವಕವಾಗಿ ನಮಸ್ಕರಿಸಲು ಯೋಗ್ಯನಾದವನೋ ಆ ವಿಷ್ಣುವಿನ ಆಕಾರವುಳ್ಳ ಸಂನ್ಯಾಸಿಯು ಅದೇ ಅಷ್ಟಾಕ್ಷರ ಮಂತ್ರದಿಂದ ನಮಸ್ಕರಿಸಲು ಯೋಗ್ಯನಾಗಿರುವನು.

*"ತುರೀಯಃ ಪರಮೋಹಂಸಃ ಸಾಕ್ಷಾನ್ನಾರಾಯಣೋ ಯತಿಃ |*
*ನಾಲ್ಕನೆಯ ಆಶ್ರಮದಲ್ಲಿರುವ ಪರಮಹಂಸನು ನಾರಾಯಣನೇ.*
*"ಯೋ ವಿಪ್ರೋಧಾರಯೇದ್ದಂಡಂ (ನಾರದ ಪರಿವ್ರಾಜಕೋಪನಿಷತ್)*
*ಸ ಚ ನಾರಾಯಣಃ ಸ್ವಯಮ್"*

ಯಾವ ಬ್ರಾಹ್ಮಣನು ಸನ್ಯಾಸಿಯಾಗಿ ದಂಡವನ್ನು ಕೈಯಲ್ಲಿ ಹಿಡಿದಿರುತ್ತಾನೋ ಅವನೇ ನಾರಾಯಣನು.

*"ಚತುರ್ಭುಜಾಃ ಪ್ರಜಾಯಂತೇ ದಂಡಧಾರಣಮಾತ್ರತಃ||*

ತ್ರಿದಂಡವನ್ನು ಕೈಯಲ್ಲಿ ಧರಿಸಿದ ಮಾತ್ರದಿಂದ ವಿಷ್ಣುವಿನ ಹಾಗೆ ನಾಲ್ಕು ತೋಳುಗಳುಳ್ಳವನಾಗುತ್ತಾನೆ.

*"ಶಿವಾದಿ ಸರ್ವೇ ದೇವಾಶ್ಚ ದೇವಾಶ್ಚ ಯತೀಷು ತಿಷ್ಠಂತಿ ನಿತ್ಯಶಃ*
*ಅಂಗುಷ್ಠಾಗ್ರೇಷು ವಿಷ್ಣುಶ್ಚ ಲಕ್ಷ್ಮ್ಯಾ ಸಾಕಂ ಸುತಿಷ್ಠತಿ||*

ಶಂಕರನಿಂದ ಹಿಡಿದು ಸಕಲ ದೇವಾಧಿ ದೇವತೆಗಳೂ ನಿತ್ಯರೂಪವಾಗಿಯೂ ಈ ಸನ್ಯಾಸಿಯಲ್ಲಿ ಇರುತ್ತಾರೆ. ಹೆಬ್ಬೆಟ್ಟಿನ ತುದಿಯಲ್ಲಿ ಲಕ್ಷ್ಮಿಯೊಂದಿಗೆ ಮಹಾವಿಷ್ಣುವೂ ವಾಸಿಸುತ್ತಾನೆ. (ಭೃಗುಋಷಿ)

ಎಲ್ಲೆಲ್ಲಿಯೂ ಹರಡಿರುವ ಆಕಾಶಕ್ಕೆ ಆಕಾರವಿಲ್ಲ. ಆ ಆಕಾಶ ಕೆಲವು ಕಾರಣಗಳಿಂದ ಕಾಳ ಮೇಘಗಳಾಗಿಯೂ, ಮಳೆಯಾಗಿಯೂ, ಹಿಮಬಿಂದುವಾಗಿಯೂ ಪರಿವರ್ತನವಾಗಿ ದೃಷ್ಟಿಗೋಚರವಾಗುತ್ತದೆ.

ಅದೇ ರೀತಿ ಅರೂಪನಾದ ಭಗವಂತನು ಭಕ್ತಿ ಭಾವನೆಯಿಂದಲೋ ಅಥವಾ ಬೇರೆ ಕಾರಣಗಳಿಂದಲೋ ದೃಷ್ಟಿಗೋಚರನಾಗುತ್ತಾನೆ.

*"ಮುಖಾಭಾಸಕೋ ದರ್ಪಣೇ ದೃಶ್ಯಮಾನೋ*
*ಮುಖತ್ವಾತ್ ಪೃಥಕ್ತ್ವೇನ ನೈವಾಸ್ತಿ ವಸ್ತು|*
*ಚಿದಾಭಾಸಕೋ ಧೀಷು ಜೀವೋಽಪಿ ತದ್ವತ್|*
*ಸನಿತ್ಯೋಪಲಬ್ಧಿಸ್ವರೂಪೋಹಮಾತ್ಮಾ||*

ಕನ್ನಡಿಯಲ್ಲಿ ಕಾಣುವ ಮುಖದ ಪ್ರತಿಬಿಂಬವು ಹೇಗೆ ಅದನ್ನೇ ತೋರಿಸುತ್ತದೋ ಹಾಗೆಯೇ ಬುದ್ಧಿಯಲ್ಲಿ ಜ್ಞಾನದ ಪ್ರತಿಬಿಂಬವಾದ ಜೀವನು ಬುದ್ಧಿಯನ್ನು ಬಿಟ್ಟು ಬೇರೆ ವಸ್ತುವಲ್ಲವು.

ಇವನೂ ಕೂಡ ಜ್ಞಾನ ಸ್ವರೂಪನಾದ, ನಿತ್ಯನಾದ ಆತ್ಮನೇ ಆಗಿರುತ್ತಾನೆ. ಹೀಗೆ ಸ್ವರೂಪ ಸಿದ್ಧನಾದ ಭಗವಂತನೇ ಭಕ್ತರ ಪ್ರಾರ್ಥನೆಯನ್ನು ನೆರವೇರಿಸುತ್ತಾನೆ. ಕನ್ನಡಿಯಲ್ಲಿ ಪ್ರತಿಬಿಂಬವು

ಚೆನ್ನಾಗಿ ಕಾಣಿಸಬೇಕಾದರೆ ಧೂಳು, ಕೊಳಕು ಇಲ್ಲದಿರಬೇಕು. ಪ್ರತ್ಯಕ್ಷವಾದ ದೈವವು ನಮಗೆ ಸಾಕ್ಷಾತ್ಕಾರವಾಗಬೇಕಾದರೆ ನಮ್ಮ ಭಕ್ತಿಭಾವನೆ ಶ್ರದ್ಧೆ ಉಳ್ಳದ್ದಾಗಿರಬೇಕು.

ದೃಷ್ಟಿಗೋಚರನಾದ ಭಗವಂತನಿಗೆ ಪೂಜಾ-ವಂದನಾದಿಗಳುಂಟು. ನಿರಾಕಾರಕ್ಕೆ ಮಾನಸ ಪೂಜೆಯೇ ಸಾಧ್ಯ. ವೇದಶಾಸ್ತ್ರ ಪುರಾಣ ಆಗಮಗಳು ಹೇಗೆ ಸ್ವರೂಪವನ್ನೊಪ್ಪಿಸುವ ದೈವಗಳನ್ನು ಬಹಿರಂಗ ಪೂಜೆಯಿಂದ ಸಂತೋಷಪಡಿಸುವುದು ಪ್ರವೃತ್ತಿ ಮಾರ್ಗದ ರೀತಿ. ಈ ಮಾರ್ಗ ಬಿಟ್ಟರೆ ಇವರುಗಳಿಗೆ ಅನೇಕ ದೋಷಗಳುಂಟಾಗುತ್ತದೆ.

*"ಅರೂಪ ರೂಪ ಆಗುವುದು ಹೇಗೆ?"*

ಪ್ರತ್ಯಕ್ಷವಾಗಿ ಕಣ್ಣಿಗೆ ಕಾಣುವ ನೀರು ಮೋಡವಾಗಿ ದಟ್ಟವಾಗುವಾಗ ಕೈಗೆ ಸಿಕ್ಕುವ ವಸ್ತುವಾಗಿ ಕಾಣುತ್ತದೆ. ಅದೇ ನೀರು ಆವಿಯಾಗಿ ಪರಿವರ್ತನೆ ಆಗುವಾಗ ಕಣ್ಣಿಗೆ ಕಾಣುವುದಿಲ್ಲವಷ್ಟೆ (ಅರೂಪ)ರೂಪವಿಲ್ಲದ ವಸ್ತುವಾಗಿ ತೋರುತ್ತದೆ. ಅರೂಪವಾಗಿರುವ ಆಕಾಶದಲ್ಲಿ ರೂಪವುಳ್ಳ ನೀರು ಆವಿ ರೂಪವನ್ನು ಹೊಂದಿ ಜಲರೂಪವುಳ್ಳ ದ್ರವವಾಗಿಯೂ ಇನ್ನೂ ದಟ್ಟವಾದ ಹಿಮಗಡ್ಡೆಯ ಸ್ಥಿತಿ ಉಂಟಾಗಿ ಕಣ್ಣಿಗೂ, ಕೈಗೂ ಗೋಚರವಾಗುತ್ತದೆ.

*"ಆಕಾಶಾತ್ ವಾಯುಃ ವಾಯೋಃ ಅಗ್ನಿಃ ಅಗ್ನೇಃ ಆಪಃ (ಅದ್ಭ್ಯಃ ಪೃಥಿವೀ)*

ಆಕಾಶದಿಂದ ವಾಯು ಉಂಟಾಗುತ್ತದೆ. ವಾಯುವಿನಿಂದ ಅಗ್ನಿ ಉಂಟಾಗುತ್ತದೆ. ಅಗ್ನಿಯಿಂದ ಜಲವು, ಜಲವು ಗಟ್ಟಿಯಾಗಿ ಮಣ್ಣು ಉಂಟಾಗುತ್ತದೆ ಎನ್ನುವುದು ಶ್ರುತಿ. ಹೀಗೆ ಅರೂಪವಾದದ್ದು ರೂಪವುಳ್ಳದ್ದಾಗಿರುತ್ತದೆ. ಒಂದು ಆಲದ ಬೀಜದಲ್ಲಿ ಕಣ್ಣಿಗೆ ಕಾಣದಂತೆ ವೃಕ್ಷದ ಭಾಗಗಳೆಲ್ಲವೂ ಇರುವುದಿಲ್ಲವೆ? ಹಾಗೆ ಕಣ್ಣಿಗೆ ಕಾಣದ ಬೀಜವು-ಮಣ್ಣು, ನೀರು ಮುಂತಾದವುಗಳೊಂದಿಗೆ ಸೇರಿದಾಗ ಮರವಾಗಿ ಬೆಳೆಯುತ್ತದೆ, ಅಲ್ಲವೇ? ಆಗ ನಾವು ಎದುರಿಗೆ ನೋಡುತ್ತೇವೆ, ಅದೇ ಮರವು ಪ್ರತಿವರ್ಷ ಅಸಂಖ್ಯಾತ ವೃಕ್ಷಗಳನ್ನುಂಟು ಮಾಡುತ್ತದೆ ಮತ್ತು ಬೀಜಗಳನ್ನು ಕೊಡುತ್ತದೆ ಈ ರೀತಿ ನೋಡಿದ್ದೇ ಆದರೆ ಒಂದು ಬೀಜ [illegible]ವಿಲ್ಲದ ಲಾಭ ಪ್ರಮಾಣ.

ಜ್ಞಾನಿಗಳು ತಮ್ಮ ಮನಸ್ಸಾಗಿರುವ ಚಿಕ್ಕ ಸ್ಥಳದಲ್ಲಿ ಅರೂಪನಾದ ಭಗವಂತನನ್ನು ರೂಪವುಳ್ಳವನನ್ನಾಗಿ ನೋಡುತ್ತಾರೆ.

ಈ ವಿಧವೇ ಪ್ರತಿಮೆಯಲ್ಲಿ ಆ ರೂಪವನ್ನು ರೂಪವನ್ನಾಗಿ ಮಾಡಿ ನೋಡುವುದಕ್ಕೆ

ಹೇಳಿರುವ ರೀತಿಗಳನ್ನು ಆ ಮಾರ್ಗದಲ್ಲಿಯೇ ಪ್ರವೀಣರಾದ ಮಹರ್ಷಿಗಳು ಅನುಭವಿಸುತ್ತಾರೆ. ಅವರುಗಳು ತಮ್ಮ ಅನುಭವವನ್ನು ಅನಂತರ ಶಾಸ್ತ್ರ ಗ್ರಂಥಗಳಲ್ಲಿ ಪ್ರಕಟ ಪಡಿಸಿರುತ್ತಾರೆ. ಅರೂಪವನ್ನು ರೂಪವನ್ನಾಗಿ ಮಾಡಿ ಅನುಭವಿಸುವ ರೀತಿಯಲ್ಲಿ ಉತ್ತಮವಾದುದನ್ನು ತಿಳಿಸಿರುತ್ತಾರೆ.

ನಾವೂ ಸಹ ಅದೇ ಶಾಸ್ತ್ರ ವಿಧಿಯ ಹಾಗೆ ಅನುಷ್ಠಾನ ಮಾಡುವುದರಿಂದ ಹೇಳಿದ ಫಲವನ್ನು ಪಡೆಯಲು ಸುಲಭ ಸಾಧ್ಯ.

## ಸಂನ್ಯಾಸಿಯ ಹಿರಿಮೆ

*"ಜಂತೂನಾಂ ನರಜನ್ಮ ದುರ್ಲಭಮತಃ ಪುಂಸ್ತ್ವಂ ತತೋ ವಿಪ್ರತಾ*
*ತಸ್ಮಾದ್ವೈದಿಕ ಧರ್ಮ ಮಾರ್ಗಪರತಾ ವಿದ್ವತ್ವಮಸ್ಮಾತ್ಪರಮ್||*
*ಆತ್ಮಾನಾತ್ಮ ವಿವೇಚನಂ ಸ್ವನುಭವಃ ಬ್ರಹ್ಮಾತ್ಮನಾ ಸಂಸ್ಥಿತಿಃ|*
*ಮುಕ್ತಿರ್ನೋ ಶತಜನ್ಮ ಕೋಟಿ ಸುಕೃತೈಃ ಪುಣ್ಯೈರ್ವಿನಾ ಲಭ್ಯತೇ*

ಪ್ರಾಣಿಗಳಲ್ಲಿ ಮನುಷ್ಯನಾಗಿ ಜನಿಸುವುದು ಅಪರೂಪ, ಹುಟ್ಟಿದರೂ ಪುರುಷನಾಗಿ ಹುಟ್ಟುವುದು ಅಪರೂಪ. ಪುರುಷನಾಗಿ ಹುಟ್ಟಿದರೂ ಬ್ರಾಹ್ಮಣನಾಗಿ ಹುಟ್ಟುವುದು ದುರ್ಲಭ ಅದರಲ್ಲೂ, ವೈದಿಕ ಧರ್ಮಮಾರ್ಗದಲ್ಲಿ ಆಸ ಉಳ್ಳವನಾಗಿರುವುದು ಅಪರೂಪ. ಹಾಗೂ ವಿದ್ವಾಂಸನಾಗಿರುವುದು ಕಷ್ಟ, ವಿದ್ವಾಂಸನಾಗಿದ್ದರೂ ಆತ್ಮಾನಾತ್ಮ ಜ್ಞಾನದೊಂದಿಗೆ ಜ್ಞಾನಕ್ಕೆ ತಕ್ಕಂತೆ ಅನುಭವದಿಂದ ಪಡೆಯುವ ಬ್ರಹ್ಮ ಸಾಕ್ಷಾತ್ಕಾರದಲ್ಲಿ ಮನಸ್ಸನ್ನು ನೆಲೆಗೊಳಿಸುವ ಸಂನ್ಯಾಸಿಯಾಗಿದ್ದು ಮುಕ್ತಿಯನ್ನು ಪಡೆಯುವುದು ಅಪರೂಪ. ಅನೇಕ ಕೋಟಿ ಜನ್ಮಗಳಲ್ಲಿ ಸತ್ಕಾರ್ಯ ರೂಪ ಪುಣ್ಯವನ್ನು ಮಾಡಿದರೂ, ಇದು ಸಿದ್ಧಿಸುವುದು ಕಷ್ಟ, ಎಂದು ಶ್ರೀ ಶಂಕರಾಚಾರ್ಯರು ವಿವೇಕ ಚೂಡಾಮಣಿಯಲ್ಲಿ ತಿಳಿಸಿರುತ್ತಾರೆ.

*"ಕಾಷಾಯ ಮಾತ್ರ ಧಾರೀಷು ಯತಿಃ ಪೂಜ್ಯೋ ಯುಧಿಷ್ಠಿರ|*

ಹೇ ಯುಧಿಷ್ಠಿರ! ಕಾಷಾಯ ಮಾತ್ರವನ್ನು ಧರಿಸಿದವನಾದರೂ ಸಂನ್ಯಾಸಿಯು ಪೂಜೆಗೆ ಅರ್ಹನೇ| (ಭಾಗವತ)

*"ಬ್ರಹ್ಮಚಾರಿ ಸಹಸ್ರಾಣಿ ವಾನಪ್ರಸ್ಥ-ಶತಾನಿಚ|*

ಬ್ರಾಹ್ಮಣಾನಾಂ ಹಿ ಕೋಟೀಸ್ತು ಯತಿರೇಕೋ ವಿಶಿಷ್ಯತೇ|

ಸಹಸ್ರ ಬ್ರಹ್ಮಚಾರಿಗಳನ್ನು, ನೂರು ವಾನಪ್ರಸ್ಥರುಗಳನ್ನು, ಮತ್ತು ಕೋಟಿ ಬ್ರಾಹ್ಮಣರುಗಳನ್ನು ಒಬ್ಬ ಸಂನ್ಯಾಸಿಯು ಮೀರಿಸಿರುತ್ತಾನೆಂದು

ಅತ್ರಿ ಮಹರ್ಷಿಗಳು ತಿಳಿಸಿರುತ್ತಾರೆ.

*"ವರ್ಣಾಶ್ರಮ ಸಹಸ್ರೇಭ್ಯಃ ಪರಹಂಸೋ ದ್ವಿಜೋತ್ತಮಃ|*

ಎಲ್ಲಾ ವರ್ಣಾಶ್ರಮಗಳಿಗಿಂತ ಶ್ರೇಷ್ಠವಾದದ್ದು ಪರಮಹಂಸಾಶ್ರಮ ಎಂದು ಅದೇ ಅತ್ರಿ ಮಹರ್ಷಿಯು ತಿಳಿಸಿರುತ್ತಾರೆ.

*ಸರ್ವೇಷಾಮಾಶ್ರಮಾಣಾಂತು ಸಂನ್ಯಾಸೀ ಹ್ಯುತ್ತಮಾಶ್ರಮೀ|"*

*ಎಲ್ಲಾ ಆಶ್ರಮಗಳಲ್ಲಿಯೂ ಉತ್ತಮವಾದ ಆಶ್ರಮಕ್ಕೆ ಸೇರಿದವನು ಸಂನ್ಯಾಸಿ.*

*(ಹಾರೀತರು)*

## ಸಂನ್ಯಾಸಿಯನ್ನು ಸತ್ಕರಿಸುವುದರ ಫಲ ಹಾಗೂ ಅವಮಾನಪಡಿಸುವುದರ ದೋಷ

*"ದೇವತಾಪ್ರತಿಮಾಂ ದೃಷ್ಟ್ವಾ ಯತಿಂ ದೃಷ್ಟ್ವಾ ತ್ರಿದಂಡಿನಮ್|*
*ನಮಸ್ಕಾರಮ್ ಕುರ್ವಾಣಃ ನರಕಂರೌರವಂ ವ್ರಜೇತ್||*

ಭಗವಂತನ ಪ್ರತಿಮೆಯನ್ನೂ ತ್ರಿದಂಡವನ್ನು ಇಟ್ಟುಕೊಂಡಿರುವ ಸಂನ್ಯಾಸಿಯನ್ನು ನೋಡಿ ನಮಸ್ಕರಿಸದವನು ರೌರವ ನರಕಕ್ಕೆ ಹೋಗುತ್ತಾನೆ.

*"ವಿಷ್ಣುಲಿಂಗಾಶ್ರಿತಂ ವಿಪ್ರಂ ದೃಷ್ಟ್ವಾ ಚೈವ ನರಾಧಮಾಃ|*
*ಸ್ಥಿತಾಃ ಶಯ್ಯಾಸನೇ ಯಾನೇ ನ ತ್ಯಜಂತಿ ವಿಮೋಹಿತಾಃ||*
*ಅಭ್ಯುತ್ಥಾನಂ ನಮಸ್ಕಾರಂ ಪ್ರಸನ್ನವದನಾದಿಕಮ್|*
*ತಸ್ಯಾಗ್ರೇ ಮನಸಾ ವಾಚಾ ಯೇ ಕುರ್ವಂತಿ ನತ್ವಿಯಾಮ್||*
*ನವಾಯಾದಪರಿಭ್ರಷ್ಟಾಸ್ತೇ ಪಾಪಾ ಯಾಂತ್ಯಧೋಗತಿಮ್||"*

ವಿಷ್ಣುವಿನ ಸ್ವರೂಪವನ್ನು ಆಶ್ರಯಿಸಿದವನಾದ ಒಬ್ಬ ಸಂನ್ಯಾಸಿಯನ್ನು ನೋಡಿ, ಹಾಸಿಗೆ,

ಆಸನ, ವಾಹನ ಇವುಗಳಿಂದ ಎದ್ದು ಬಂದು ನಮಸ್ಕರಿಸದೆ ಮನಸ್ಸಿನಲ್ಲೂ, ಮಾತಿನಲ್ಲೂ, ಕಾರ್ಯದಲ್ಲೂ ಸತ್ಕರಿಸದ ನರಾಧಮನು ಒಳ್ಳೆಯ ನಡತೆಯಿಂದ ದೂರನಾಗಿ ಪಾಪದಿಂದ ನರಕಕ್ಕೆ ಹೋಗುತ್ತಾನೆ.

*"ಯತ್ರ ಕ್ವಾಪಿ ಯತಿಂ ದೃಷ್ಟ್ವಾ ಯೋ ದಂಡವನ್ನವೇತ್ |*
*ನ ನಮೇದ್ಯಾತಿ ಕಾಯೇನ ಕಲ್ಪಾಂತಂ ರೌರವಾಲಯಃ ||*

ಸಂನ್ಯಾಸಿಯನ್ನು ಯಾವ ಸ್ಥಳದಲ್ಲಿ ನೋಡಿದರೂ ಬೇರು ಕಿತ್ತ ವೃಕ್ಷವು ಬೀಳುವಂತೆ ನಮಸ್ಕರಿಸದವನು ಪುನಃ ಕಳದಂತಹ ನರಕಕ್ಕೆ ಬೀಳುತ್ತಾನೆ (ಹಾರೀತರು)

*"ಉಪಚರ್ಯಾಃ ಸದಾ ಭಿಕ್ಷುರಾಶ್ರಮಸ್ಥೋ ವಿಚಕ್ಷಣೈಃ |*
*ವ್ರತಲೋಪೋ ಯಥಾ ಚಾಸ್ಯ ನ ಭವೇತ್ತು ಯಥಾ ತಥಾ ||*

ಸಂನ್ಯಾಸಾಶ್ರಮವನ್ನು ಪಾಲಿಸುವನು ವಿವೇಕಿಗಳಿಂದ ಸದಾ ಪೂಜಿಸಲ್ಪಡುವಂಥವನಾಗುತ್ತಾನೆ. ಅವನಿಗೆ ವ್ರತ ಲೋಪವಿಲ್ಲದ ಹಾಗೆ ಉಪಚಾರ ಮಾಡಬೇಕು.

(ವಿರುಕ ದಯಾ ಪ್ರಿವಲ್ಲಿಯನ್)

## ಭಿಕ್ಷಾವಿಧಿ

ಒಂದು ಗ್ರಾಮಕ್ಕೆ ಅಥವಾ ಅದಕ್ಕಿಂತ ದೂರವಾದ ವನಕ್ಕೆ ಒಬ್ಬ ಸಂನ್ಯಾಸಿ ಬಂದಿರುವನೆಂದು ಯಾರಿಗೆ ತಿಳಿದರೂ, ಅವನು ಯತಿಗೆ ಉಪಚಾರ ಮಾಡಿ ಅವರನ್ನು ಸತ್ಕರಿಸಿ, ಅವರ ಆಗಮನವನ್ನು ಆ ಗ್ರಾಮ ಅಥವಾ ನಗರದಲ್ಲಿ ಪ್ರಚಾರ ಮಾಡಬೇಕು. ಎಲ್ಲರೂ ಫಲ-ಪುಷ್ಪ, ಹಣ್ಣು-ಹಂಪಲನ್ನು ತೆಗೆದುಕೊಂಡು ಹೋಗಿ ಆ ಪರಿವ್ರಾಜಕರಾದ ಯತಿಯನ್ನು ಸಂದರ್ಶಿಸಿ ಆಶೀರ್ವಾದ ಪಡೆದು ಬರಬೇಕು. ಅವರ ಭಿಕ್ಷೆಗೆ ಅವಶ್ಯಕವಾದ ಸಾಮಗ್ರಿಗಳನ್ನು ಒದಗಿಸಿಕೊಡಬೇಕು. ಹೀಗೆ ಮಾಡಿದ್ದೇ ಆದರೆ ಆ ಗ್ರಾಮದಿಂದ ದುರ್ಭಿಕ್ಷ, ರೋಗ-ರುಜಿನಗಳು ದೂರವಾಗುತ್ತವೆ. ಆ ಯತಿವರ್ಯರನ್ನು ಸಕಲ ಮರ್ಯಾದೆಗಳೊಂದಿಗೆ ಗ್ರಾಮಕ್ಕೆ ಕರೆದುಕೊಂಡು ಬರಬೇಕು. ಎಂದರೆ ರಾಜನಿಗೆ ಸಲ್ಲುವ ಮರ್ಯಾದೆಯನ್ನು ಯತಿಗಳಿಗೆ ಮಾಡಬೇಕು.

*"ಯಥಾ ರಾಜಾ ಜನೈಃ ಸರ್ವೈಃ ಪೂಜ್ಯತೇ ಮುನಿಸತ್ತಮ |*

ತಥಾ ಜ್ಞಾನೀ ಸದಾ ದೇವೈಃ ಮುನಿಭಿಃ ಪೂಜ್ಯ ಏವಹಿ||'(ಸೂತ ಸಂಹಿತೆ)

ಯಾವ ರೀತಿ ಅರಸನು ಎಲ್ಲರಿಂದಲೂ ಪೂಜಿಸಲ್ಪಡುತ್ತಾನೋ ಹಾಗೆಯೇ ಜ್ಞಾನಿಯಾದ ಸಂನ್ಯಾಸಿಯು ದೇವತೆಗಳಿಂದಲೂ, ಮುನಿಗಳಿಂದಲೂ ಪೂಜಿಸಲ್ಪಡತಕ್ಕವನು.

"ಯದೇವ ಚ ಗೃಹಸ್ಥಸ್ಯ ನಿರಾಶೋಽಭಿಕ್ಷುಕೋ ಗತಃ|
ಪಾತಕಂ ದತ್ತ್ವಾ ತಪೋ ದತ್ತಂ ಸರ್ವಮಾದಾಯ ಗಚ್ಛತಿ||

ಆ ಸಂನ್ಯಾಸಿ ಯಾವ ಗೃಹಸ್ಥನ ಮನೆಗೆ ಹೋಗಿ ನಿರಾಸೆಯಿಂದ ಹಿಂತಿರುಗುತ್ತಾನೋ, ಆ ಗೃಹಸ್ಥನ ಅಗ್ನಿಹೋತ್ರ, ತಪಸ್ಸು, ಅಧ್ಯಯನ ಇವುಗಳೆಲ್ಲವೂ ಸಂನ್ಯಾಸಿಯಿಂದ ಅಪಹರಿಸಲ್ಪಡುತ್ತದೆ ಎಂದರೆ ಆ ಗೃಹಸ್ಥನು ಮಾಡಿದ ಅಗ್ನಿಹೋತ್ರ ಮುಂತಾದ ಫಲಗಳು ಅವನನ್ನು ಬಿಟ್ಟು ಈ ಸಂನ್ಯಾಸಿಯನ್ನು ಸೇರುತ್ತದೆ ಎಂಬುದೇ ತಾತ್ಪರ್ಯ. ಆದ್ದರಿಂದ ಸಂನ್ಯಾಸಿಯನ್ನು ಶ್ರದ್ಧೆಯಿಂದ ಉಪಚಾರ ಮಾಡದೆ ನಿರಾಸೆಯಿಂದ ಕಳುಹಿಸುವುದು ದೋಷವೆಂದಾಗುತ್ತದೆ.

## ಭಿಕ್ಷೆಯ ವಿಧಿ-ವಿಧಾನ

"ಮಾಧೂಕರಮಸಂಕ್ಲೃಪ್ತಂ ಪ್ರಾಕ್ ಪ್ರಣೀತಮಯಾಚಿತಮ್|
ತಾತ್ಕಾಲಿಕಂ ಚೋಪಪನ್ನಂ ಭೈಕ್ಷಂ ಪಂಚವಿಧಂ ಸ್ಮೃತಮ್ ||@

1. ಉದ್ದೇಶವಿಲ್ಲದೆ 3,5 ಅಥವಾ 7 ಗೃಹಗಳಲ್ಲಿ ಮಾಧೂಕರವನ್ನು ಮಾಡುವುದು.
2. ನಿದ್ರೆಯಿಂದ ಏಳುವ ಮೊದಲು ಭಕ್ತನಿಗೆ ಭಿಕ್ಷೆಗೆ ಸಮ್ಮತಿಯನ್ನು ನೀಡುವುದು.
3. ಭಿಕ್ಷೆಗಾಗಿ ತೆರಳುವ ಮೊದಲು ದೊರೆಯುವ ಭಿಕ್ಷೆ(ಅಯಾಚಿತ)
4. ಭಿಕ್ಷೆಗಾಗಿ ಹೊರಟ ನಂತರ ಆಕಾಲದಲ್ಲಿ ದೊರೆತ ಭಿಕ್ಷೆ.
5. ಆಹಾರವನ್ನು ಸಿದ್ಧಪಡಿಸಿ ಮಠದಲ್ಲಿ ಏರ್ಪಡಿಸುವ ಭಿಕ್ಷೆ (ಉಪಪನ್ನಮ್) ಎಂದು 5 ವಿಧಗಳು.

## "ಭಿಕ್ಷಾನಿಷೇಧಗಳು"

ಕ್ಷುದ್ರಶೇಷಗಳು, ಶ್ರಾದ್ಧದ ಅನ್ನ, ಮಕ್ಕಳು ದಂಪತಿಗಳು ಊಟ ಮಾಡಿದ ಅನಂತರ ಮಿಕ್ಕ ಅನ್ನ, ವಿಷ್ಣುವನ್ನು ಹೊರತು ಮಿಕ್ಕ ದೇವತೆಗಳಿಗೆ ನೈವೇದ್ಯ ಮಾಡಿದ ಮತ್ತು ಸಂನ್ಯಾಸಿಗೆಂದು ಬೇರೆಯಾಗಿ ಮಾಡಿದ ಅನ್ನ ಇವುಗಳನ್ನು ವರ್ಜಿಸಬೇಕು.

(ತ್ರಿ)ದಂಡವುಳ್ಳ ಸಂನ್ಯಾಸಿಯೊಂದಿಗೆ, ಗೃಹಸ್ಥರನ್ನಾಗಲೀ. ದಂಡವಿಲ್ಲದ ಆತುರ ಸಂನ್ಯಾಸಿ ಇವರುಗಳನ್ನಾಗಲೀ ಒಂದೇ ಪಂಕ್ತಿಯಲ್ಲಿ ಭೋಜನಕ್ಕೆ ಕೂರಿಸಬಾರದು.

ತಂದೆ ಸತ್ತ ಅನಂತರ ಒಂದು ವರ್ಷ, ತಾಯಿಯು ಸತ್ತನಂತರ 6 ತಿಂಗಳು, ಮಗನು ಸತ್ತ ನಂತರ 6 ತಿಂಗಳು, ಹೆಂಡತಿಯು ಸತ್ತ ನಂತರ 3 ತಿಂಗಳು, ಸಪಿಂಡಿ ದಾಯಾದಿಗಳು ಸತ್ತಾಗ ಒಂದು ತಿಂಗಳು, ಕುಮಾರನು ಹುಟ್ಟಿದಾಗ ಒಂದು ತಿಂಗಳು, ಕುಮಾರ್ತಿ ಹುಟ್ಟಿದಾಗ 40ದಿನಗಳು ಎಮ್ಮೆ, ಹಸು, ನಾಯಿ, ಬೆಕ್ಕು ಕುದುರೆ ಇವುಗಳು ಮರಿ ಹಾಕಿದರೆ ಆ ಮನೆಯಲ್ಲಿ 10 ದಿನಗಳವರೆಗೆ ಭಿಕ್ಷೆ ನಿಷೇಧ.

## ಯತಿ ಪೂಜೆ

ಸಾಕ್ಷಾತ್ ಮಹಾವಿಷ್ಣುವಿಗೆ ದೇವಾಲಯಗಳಲ್ಲಿ ನೆರವೇರಿಸುವ ಹಾಗೆಯೇ ಯತಿಯ ಹೆಬ್ಬೆರಳಿಗಾಗಲೀ ಅಥವಾ ಪಾದುಕೆಗಾಗಲಿ ಪುರುಷ ಸೂಕ್ತವನ್ನು ಹೇಳಿ ಅಭಿಷೇಕವನ್ನು ಮತ್ತು ದ್ವಾದಶನಾಮ, ಅಷ್ಟೋತ್ತರ, ಸಹಸ್ರ ನಾಮಾರ್ಚನೆ ಮಾಡುವುದು ಅನೇಕ ಸ್ಥಳಗಳಲ್ಲಿ ವಿವಿಧ ಭಕ್ತರೂ ಆಚರಿಸುವ ವಿಧಾನ.

*"ಯತೀನಾಂ ಪಾದಯೋಃ ಸಮ್ಯಗ್ ವಿಷ್ಣು ಸೂಕ್ತೇನ ಸಿಂಚತಿ|*
*ತೇ ನರಾ ವಿಷ್ಣು ಸಾಯುಜ್ಯಂ ಪ್ರಾಪ್ನುವಂತಿ ನ ಸಂಶಯಃ||*

ಯತಿಗಳ ಪಾದಗಳಲ್ಲಿ ಯಾವನು ವಿಷ್ಣು ಸೂಕ್ತಗಳಿಂದ ಅಭಿಷೇಕ ಮಾಡುವನೋ ಅವನು ನಿಸ್ಸಂದೇಹವಾಗಿ ವಿಷ್ಣು ಸಾಯುಜ್ಯವನ್ನು ಹೊಂದುತ್ತಾನೆ.

## ಮಂಡಲಮ್

ಯತಿಗೆ ಭೋಜನಕ್ಕೆ ಎಲೆ ಹಾಕುವ ಸ್ಥಳವನ್ನು ಗೋಮಯದಿಂದ ಶುದ್ಧ ಪಡಿಸಿ ಅವರು ಊಟಕ್ಕೆ ಕುಳಿತುಕೊಳ್ಳುವ ಪೀಠ ಮತ್ತು ಎಲೆಯ ಕೆಳಗೂ ರಂಗೋಲಿಯಿಂದ ಅಲಂಕರಿಸಬೇಕು. ದೀಪ-ಧೂಪಗಳಿಂದ ಸ್ವಚ್ಛಗೊಳಿಸಿ ಎಲೆಯ ಸುತ್ತಲೂ ಶುದ್ಧಿಗೊಳಿಸಬೇಕು.

*ಓಂ ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ಶ್ರೀ ಹುತಾಶನ ಏವ ಚ|*
*ಮಂಡಲೇನೋಪ ಜೀವಂತಿ ತಸ್ಮಾತ್ ಕುರ್ವೀತ ಮಂಡಲಮ್||*

ಓಂ ಬ್ರಹ್ಮಾದ್ಯಾಶ್ಚ ಸುರಸ್ಸರ್ವೇ ವಸಿಷ್ಠಾದ್ಯಾ ಮಹರ್ಷಯಃ|
ಮಂಡಲೇನಾಪಿ ಜೀವಂತಿ ತಸ್ಮಾತ್ಕುರ್ವೀತ ಮಂಡಲಮ್||
ಓಂ ಅಗ್ನಿಶ್ಚ ವಸವೋ ರುದ್ರಾಃ ಬ್ರಹ್ಮಾ ಚೈವ ಪಿತಾಮಹಃ|
ಮಂಡಲೇನಾಪಿ ಜೀವಂತಿ ತಸ್ಮಾತ್ಕುರ್ವೀತ ಮಂಡಲಮ್||"

ಶುದ್ಧಿ ಮಾಡಿದ ಸ್ಥಳದಲ್ಲಿ ಮೇಲೆ ಹೇಳಿದ ಮಂತ್ರವನ್ನು ಹೇಳಿ ತುಳಸಿಯಿಂದ ಅರ್ಚನೆ ಮಾಡಿ, ಆ ತುಳಸಿಯನ್ನು ವಿಸರ್ಜನೆ ಮಾಡಿ ಎಲೆಯನ್ನು ಆ ಜಾಗದಲ್ಲಿ ಹಾಕಿ ಕ್ರಮಾನುಸಾರ ಬಡಿಸಬೇಕು. ಅನಂತರ ಪುನಃ ಹೇಳುವ ಮಂತ್ರವನ್ನು ಹೇಳಿ ಹಸ್ತೋದಕವನ್ನು ಕೊಡಬೇಕು. ಇತರ ಮಂತ್ರಗಳನ್ನು ಹೇಳಬಹುದು.

## ಹಸ್ತೋದಕ

"ಯತಿ ಹಸ್ತೇ ಜಲಂ ದದ್ಯಾತ್ ಭಿಕ್ಷಾಂ ದದ್ಯಾತ್ ಪುನರ್ಜಲಮ್|
ತದ್ಭಕ್ಷ್ಯಂ ಮೇರುಣಾ ತುಲ್ಯಂ ತಜ್ಜಲಂ ಸಾಗರೋಪಮ||
ಯತಿರ್ಯಸ್ಯ ಗೃಹೇ ಭುಂಕ್ತೇ ತಸ್ಯ ಭುಂಕ್ತೇಸ್ವಯಂ ಹರಿಃ|
ಹರಿರ್ಯಸ್ಯ ಗೃಹೇಭುಂಕ್ತೇತಸ್ಯ ಭುಂಕ್ತೇ ಜಗತ್ರಯಂ||
ಏಕೋ ವಿಷ್ಣುರ್ಮಹದ್ಭೂತಂ ಪೃಥಗ್ಭೂತಾನ್ಯನೇಕಶಃ|
ತ್ರೀನ್ ಲೋಕಾನ್ ವ್ಯಾಪ್ಯ ಭೂತಾತ್ಮಾ ಭುಂಕ್ತೇ ವಿಶ್ವಭುಗವ್ಯಯಃ||

ಈ ಮಂತ್ರವನ್ನು ಹೇಳಿ ಹಸ್ತೋದಕವನ್ನು ಕೊಡಬೇಕು.

### ಭಿಕ್ಷೆಯ ಅನಂತರ ಮಾಡಬೇಕಾದ ವಿಧಿಗಳು

ಯತಿಯ ಭಿಕ್ಷೆ ಮುಗಿದ ಅನಂತರ, ಮನೆಯಲ್ಲಿರುವವರೆಲ್ಲರೂ ಅತ್ಯಧಿಕ ಶ್ರದ್ಧೆಯಿಂದ ದಂಡವತ್ ಪ್ರಣಾಮ ಮಾಡಿ, ಅವರ ನಿವಾಸಕ್ಕೆ ಕರೆದುಕೊಂಡು ಹೋಗಿ ಬಿಟ್ಟು, ಅನಂತರ ಭೋಜನ ಮಾಡಬೇಕು. ಮೇಲೆ ಹೇಳಿರುವ ನಮಸ್ಕಾರದ ಸಮಯದಲ್ಲಿ ಯತಿವರ್ಯರಿಗೆ ಅವಶ್ಯಕವಾದ ವಸ್ತುವನ್ನು ಕೊಡುವುದು ಪದ್ಧತಿ. ವಸ್ತ್ರವನ್ನು ನೀಡಬೇಕಾದರೆ, ಆ ವಸ್ತ್ರವನ್ನು ಕಾವಿಯಲ್ಲಿ ನೆನೆಸುವ ಮೊದಲು ಸನ್ಯಾಸಿಯು ಕೆಲವಾರು ಮಂತ್ರಗಳನ್ನು ಹೇಳಬೇಕಾಗಿರುವುದರಿಂದ, ಕಾವಿಯನ್ನು ವಸ್ತ್ರದಲ್ಲಿ ಇಟ್ಟುಕೊಡಬೇಕು.

# ಅಪಚಾರಗಳು

*"ನಾಮ ಗೋತ್ರಾದಿ ಚರಣಂ ಕಾಲ ಕ್ಷೇತ್ರಶ್ರುತಂ ಕುಲಮ್|*
*ವಯೋವೃತ್ತಂ ಶೀಲಮೇವಂ ಯಾಚಯೇನ್ನೈವ ಸದಾಃ||*

ಯತಿಯ ಹೆಸರು ಗೋತ್ರ, ಸಂತತಿ, ದೇಶ ಕಾಲ, ಕುಲ, ವಿದ್ಯೆ, ವಯಸ್ಸು, ವ್ರತ, ಶೀಲ ಇವುಗಳನ್ನು ಕುರಿತು ಮಾತನ್ನಾಡಬಾರದು. ಮನೋವಾಕ್ಕಾಯಗಳಿಂದ ಏನಾದರೂ ಅಪಚಾರ ನಡೆದಿದ್ದೇ ಆದರೆ ಅದರಿಂದ ಉಂಟಾಗುವ ದುಷ್ಫಲ ಅನೇಕ.

*"ಅಪಮಾನೇ ಕೃತೇ ದೇವಾ ಸ್ಸರ್ವೇ ಚೈವಾಪಮಾನಿತಾಃ||"*

ಇವರನ್ನು ಅಪಮಾನ ಗೊಳಿಸುವುದರಿಂದ ಸಕಲ ದೇವತೆಗಳನೂ ಅಪಮಾನ ಘಟಿಸಿದಂತೆ ಆಗುತ್ತದೆ.

*"ಸರ್ವೇಷಾಂ ಅಪರಾಧಾನಾಂ ಯತಿನಿಂದಾ ಗರೀಯಸೀ|*
*ಯತಿರ್ನಾರಾಯಣಃ ಸಾಕ್ಷಾತ್ ನಸ್ಮಾತ್ತಾಂ ಪರಿವರ್ಜಯೇತ್|*

ದೋಷಗಳಲ್ಲಿ ಸಂನ್ಯಾಸಿಯನ್ನು ನಿಂದಿಸುವ ದೋಷವು ಅತಿ ಪಾಪಕರವಾದದ್ದು. ಶ್ರೀ ಮನ್ನಾರಾಯಣನ ಸಾಕ್ಷಾತ್ ರೂಪವೇ ಯತಿ ಎನ್ನುವುದರಿಂದಲೂ ( ಈ ದೋಷಕ್ಕೆ ಪ್ರಾಯಶ್ಚಿತ್ತವಿಲ್ಲ) ಯತಿ ನಿಂದೆಯನ್ನು ಮಾಡಬಾರದು.

*"ಕರ್ಮಣಾ ಮನಸಾ ವಾಚಾ ಯೇ ಕುರ್ವಂತಿ ಸತ್ಕ್ರಿಯಾಮ್*
*ನದಾಚಾರಪರಿಭ್ರಷ್ಟಾಸ್ತೇ ಪಾಪಾ ಯಾಂತ್ಯಧೋಗತಿಮ್||"*

ಮನೋ ವಾಕ್ಕಾಯಗಳಿಂದ ಯತಿಯನ್ನು ಸತ್ಕರಿಸದವರು ದುರ್ಭಾಗ್ಯರು. ತಾವು ಮಾಡುವ ಈ ಪಾಪದಿಂದ ಅಧೋಗತಿಯನ್ನು ಹೊಂದುತ್ತಾರೆ.

*"ಯತಿಹಸ್ತಗತಂ ದ್ರವ್ಯಂ ಗೃಹ್ಣೀಯಾತ್ ಜ್ಞಾನತೋ ಯದಿ?*
*ಅಧಸ್ತನಯಾತೇ ಮೂಢಃ ಕುಲಾನಾಮೇಕವಿಂಶತಿಮ್||"*

ಸಂನ್ಯಾಸಿಯ ದ್ರವ್ಯವನ್ನು ಮನಃ ಪೂರ್ವಕವಾಗಿ ಅಪಹರಿಸಿದ್ದೇ ಆದರೆ ತನ್ನ 21 ಸಂತತಿವರೆಗೂ ರೌರವ ನರಕದಲ್ಲಿ ಬೀಳುತ್ತಾರೆ.

*"ಗುಣಮೆನ್ನುಂ ಕುನ್ರೇರಿ ನಿನ್ರಾರ್-ವೆಕುಳಿ*
*ಕಣಮೇಯುಂ ಕಾತ್ತಲರಿದು ||*

ಗುಣವಾಗಿರುವ ಬೆಟ್ಟವನ್ನೇರಿದ ಯತಿಗೆ ಕೋಪದಿಂದ ಬರುವ ಕಷ್ಟಗಳು ಬರದ ಹಾಗೆ ತಡೆಯುವುದು ವಿಶೇಷ ಎಂದು "ತಿರುವಳ್ಳುವರು" ಹೇಳುತ್ತಾರೆ.

*"ಅರುಟ್ ಶ್ಸೆಲ್ವಮ್ ಶೆಲ್ವತ್ತುಳ್ ಶೆಲ್ವಮ್|*
*ಪೊರುಟ್ ಶೆಲ್ವಮ್ ಬೂರಿಯಾರ ಕಣ್ಣುಮುಳ || (ನಾಲಡಿಯಾರ್)*

ನಾಲ್ಕು ಕಡೆಯಿಂದಲೂ ಕೋಟೆಯಿಂದ ಕಟ್ಟಲ್ಪಟ್ಟ ಅರಮನೆಯಲ್ಲಿ ವಾಸ ಮಾಡುವವರಾದರೂ ಸಂನ್ಯಾಸಿಯು ಕೋಪಿಸಿಕೊಂಡರೆ ಬದುಕುವುದು ಅಸಾಧ್ಯ.

*"ಶಮಪ್ರಧಾನೇಷು| ತಪೋಧನೇಷು ಗೂಢಂ ಹಿ ದಾಹಾತ್ಮ ಕಂ ಅಸ್ತಿ ತೇಜಃ||"*

ಶಾಂತಿಯೇ ಪ್ರಧಾನವಾಗಿ ಇರುವ ತಪೋಧನರುಗಳಾದ ಯತಿಗಳ ಹತ್ತಿರ ಯಾವುದನ್ನಾದರೂ ದಹಿಸಬಲ್ಲ ತಪಶ್ಶಕ್ತಿ ಸ್ಪಷ್ಟವಾಗಿ ಕಾಣ ಬರುವುದಿಲ್ಲ. ಇದನ್ನು ತಿಳಿದು ಅವರುಗಳ ಕೋಪಕ್ಕೆ ಪಾತ್ರರಾಗದೆ ಬಾಳುವುದೇ ಬುದ್ಧಿವಂತರ ಲಕ್ಷಣವಾಗಿದೆ. (ಕಾಳಿದಾಸ)

*"ಆಶ್ರಮ ಅಥವಾ ಮಠ "*

ಸಂನ್ಯಾಸಿಗಳು, ವೃದ್ಧಾಪ್ಯದಲ್ಲಿ ವಾಸಿಸಲು ಸರ್ವಸೌಕರ್ಯದಿಂದ ಕೂಡಿದ ಆಶ್ರಮ ಅಥವಾ ಮಠವನ್ನು ನಿರ್ಮಾಣ ಮಾಡಿ, ಅವರ ಸೇವೆಗಾಗಿ ಒಳ್ಳೆಯ ಏರ್ಪಾಡನ್ನು ಅವಶ್ಯವಾಗಿ ಮಾಡಬೇಕು. ಹಾಗೆ ಮಾಡಿದರೆ ಅವರಿಗೆ ಸರ್ವಾಭೀಷ್ಟಗಳೂ ಸಿದ್ಧಿಸುತ್ತವೆ.

*"ನನ್ರೇ ಶೆಯಲ್‌ವೇಂಡುಂ-ಅದುವುಮ್*
*ಇನ್ರೇ ಶೆಯಲ್‌ವೇಂಡುಮ್ ||*

ಹಿಂದಿನ ಜನ್ಮದಲ್ಲಿ ಮಾಡಿದ್ದ ಹಿರಿಯರ ಸೇವೆ ಮುಂತಾದ ಸತ್ಕರ್ಮಗಳಿಂದಲ್ಲವೇ ಈ ಜನ್ಮದಲ್ಲಿ ಒಬ್ಬನು ಧನವಂತನಾಗಿಯೋ, ಒಳ್ಳೆಯ ನಡವಳಿಕೆ ಉಳ್ಳವನಾಗಿಯೋ ಹುಟ್ಟುತ್ತಾನೆ. ಪೂರ್ವಜನ್ಮದಲ್ಲಿ ಮಾಡಿದ್ದ ಪುಣ್ಯ-ಪಾಪ ಕರ್ಮಗಳ ಕಾರಣವಾಗಿ, ಅಲ್ಲದಿದ್ದರೆ ಈ ಜನ್ಮದಲ್ಲಿ ಮೇಲು-ಕೀಳು ಏರ್ಪಡುವುದಿಲ್ಲವು .

ಈ ಜನ್ಮದಲ್ಲಿ ಪ್ರಾಪ್ತವಾಗಿರುವ ಪದವಿಗೂ ಈ ಜನ್ಮದಲ್ಲಿ ಮಾಡುವ ಒಳ್ಳೆಯ ಅಥವಾ ಕೆಟ್ಟ ಕಾರ್ಯಗಳೇ ಕಾರಣ ಎಂದು ತಿಳಿಯುವುದು ವಿವೇಕಿಗಳ ಲಕ್ಷಣ. ಯಾವ ಮನುಷ್ಯನಿಗೂ ತನ್ನ ಕೊನೆಯ ಕಾಲ ಯಾವಾಗ ಎಂಬುದು ಗೊತ್ತಿಲ್ಲ. ಆದ್ದರಿಂದ ಒಳ್ಳೆಯ ಕಾರ್ಯಗಳಲ್ಲಿ ಯಾವುದು ವಿಶೇಷವಾದದ್ದೋ ಅದನ್ನು ಸಮಯ ಬಂದಾಗ ತತ್‌ಕ್ಷಣ ಮಾಡಬೇಕು. ನಮ್ಮ ಪೂರ್ವಜರನ್ನು ಮೂರ್ಖರೆಂದರೆ ನಮ್ಮ ಮುಂದಿನ ಸಂತತಿಯು ನಮ್ಮನ್ನು ಮೂರ್ಖರೆನ್ನುವುದರಲ್ಲಿ ಏನು ಸಂಶಯ? ಈಗ ನಮ್ಮ ದೇಶದಲ್ಲಿರುವ ಸ್ಥಿತಿಯು ಚಿಂತಾಜನಕವಾಗಿರುತ್ತದೆ. ನಮ್ಮ ದೇಶದ ವಸ್ತುಗಳು ವಿದೇಶಗಳಿಗೆ ಹೋಗಿ ಅಲ್ಲಿ ಹೆಚ್ಚು ಬೆಲೆ ಪಡೆದು ಪುನಃ ನಮ್ಮ ದೇಶಕ್ಕೇ ಬರುವಂತೆ, ನಮ್ಮ ದೇಶದ ಮಾರ್ಗವೂ ಶಾಸ್ತ್ರಗಳೂ ವಿದೇಶಗಳಿಗೆ ಹೋಗಿ ಬೆಲೆ ಹೆಚ್ಚಿ ಪುನಃ ಇಲ್ಲಿಗೆ ಬಂದರೆ ಮಾತ್ರ ವಿಶೇಷ ಮೌಲ್ಯವುಳ್ಳದ್ದಾಗಿ ಆಗುತ್ತದೆ.

ಸನಾತನ ಧರ್ಮವನ್ನು ಪಾಲಿಸಿ, ಹಿರಿಯರ ಮಾತನ್ನು ಕೇಳಿ ಒಳ್ಳೆಯದನ್ನೇ ಮಾಡಬೇಕು. ಅದನ್ನು ಈ ದಿನವೇ ಮಾಡಬೇಕು.

## ಮಠಾಧಿಪತಿಗಳು

ಭಗವದ್ರಾಮಾನುಜರು ತಮ್ಮ ಶಿಷ್ಯರುಗಳಲ್ಲಿ ಕೆಲವು ವಿದ್ವಾಂಸರನ್ನು 74 ಸಿಂಹಾಸನಾಧಿಪತಿಗಳನ್ನಾಗಿ ನಿರ್ಮಿಸಿದರು.

74ಸಿಂಹಾಸನಾಧಿಪತಿಗಳಲ್ಲಿ ಸಂಸಾರ ಸಂಬಂಧವಿಲ್ಲದ ಸನ್ಯಾಸಿಗಳಿಂದ ಶಿಷ್ಯ- ಪ್ರಶಿಷ್ಯ ಕ್ರಮವಾಗಿ ಜ್ಞಾನ ಸಂತಾನ ಒಂದೇ ಬೆಳೆದು ಬರುವುದು. ಹೀಗೆ ಶಿಷ್ಯಾಚಾರ್ಯ ಕ್ರಮದಲ್ಲಿ ತಮ್ಮ ಹಿಂದಿನವರಿಂದ ಸನ್ಯಾಸಾಶ್ರಮವನ್ನು, ಬ್ರಹ್ಮ ವಿದ್ಯೋಪದೇಶವನ್ನೂ ಹೊಂದಿ ಪರಮಹಂಸರಾಗಿಯೇ ಇದ್ದು ಪುಣ್ಯಕ್ಷೇತ್ರಗಳಲ್ಲಿ ಜ್ಞಾನಾನುಷ್ಠಾನ ಪ್ರಚಾರಕ್ಕಾಗಿ ನಿಂತವರುಗಳಿಗೆ ಮಠಾಧಿಪತಿಗಳೆಂದು ಹೆಸರು.

## ಆಚಾರ್ಯಪುರುಷರು

ಗೃಹಸ್ಥ ಸಿಂಹಾಸನಾಧಿಪತಿಗಳು ಧರ್ಮಪ್ರಜಾಸಂಪತ್ತಿಗೆ ಸ್ವರೂಪಯೋಗ್ಯರೆಂಬುದು, ನಿರಾಬಾಧವಾದ್ದರಿಂದ ಜ್ಞಾನ ಸಂತಾನದಂತೆ ಶರೀರ ಸಂತಾನವೂ ಅಭಿವೃದ್ಧಿಯಾಗುತ್ತದೆ.

ಇವೆರಡೂ ಯಾವ ಗೃಹಸ್ಥರಿಗೆ ಸರಿಯಾಗಿರುತ್ತದೆಯೋ ಅವರಿಗೆ ಆಚಾರ್ಯ ಪುರುಷರೆಂದು ಪ್ರಸಿದ್ಧಿ ಇರುತ್ತದೆ. ಶಿಷ್ಯರಿಗೆ ಉಪದೇಶ, ತಾಪ-ಪುಂಡ್ರಧಾರಣೆ ಮಾಡಿದರೆ ಆಚಾರ್ಯ ಪುರುಷರೆಂತಲೂ, ಅವರವರ ಸಂತಾನಕ್ಕೇ ನೀಡುವವರನ್ನು ಸ್ವಯಮಾಚಾರ್ಯಪುರುಷರೆಂತಲೂ ವ್ಯವಹಾರಿಸಿದು.

"ಗೃಹಸ್ಥರೂ, ಸಂನ್ಯಾಸಿಗಳೂ ಇವರುಗಳ ಅನ್ಯೋನ್ಯತೆ" ವೇದಾಂತಾರ್ಥ ಜ್ಞಾನಾನುಷ್ಠಾನವೇ ಆತ್ಮೋಜ್ಜೀವನ ಎಂದು ಸರ್ವಶಾಸ್ತ್ರ. ಪ್ರಸಿದ್ಧವಾದ್ದರಿಂದ 74 ಸಿಂಹಾಸನಾಧಿಪತಿಗಳಲ್ಲಿ ತರ-ತಮ-ಭಾವ-ಭೇದವು ಯಾವುದೂ ಇಲ್ಲದೆ ದರ್ಶನ ಪ್ರವರ್ತನ ಆಚಾರ್ಯ ಭಾವವು ಏಕರೂಪವಾಗಿ ಉಂಟಾಯಿತು. ಈ ರೀತಿ ಅಭಿವೃದ್ಧಿ ಆದ ಜ್ಞಾನ ಸಂತಾನದಲ್ಲಿ, ಗೃಹಸ್ಥರೂ-ಸಂನ್ಯಾಸಿಗಳೂ ಆಚಾರ್ಯ ಶಿಷ್ಯಭಾವದಿಂದ ಪರಸ್ಪರ ಐಕ್ಯಮತ್ಯದಿಂದ ಈವರೆಗೂ ಇದ್ದಾರೆ.

ಸರ್ವೇಶ್ವರನು ರಾಮ-ಕೃಷ್ಣಾದ್ಯವತಾರ ಮಾಡಿದಾಗ ತಾನೂ ಆಚಾರ್ಯನನ್ನು ಅಂಗೀಕರಿಸಿದನು. ಶ್ರೀ ರಾಮನಿಗೆ-ವಸಿಷ್ಠರು, ಶ್ರೀ ಕೃಷ್ಣನಿಗೆ ಸಾಂದೀಪಿನಿಯೂ ಆಚಾರ್ಯರಾಗಿದ್ದರು. ಈಗ ನಿಷ್ಠಾವಂತರಾದ ಆಚಾರ್ಯರೂ ಅಂತಹ ಪ್ರತಿಪತ್ತಿ ಉಳ್ಳ ಶಿಷ್ಯರೂ ದುರ್ಲಭ.

ಪೂರ್ವಕರ್ಮಫಲದಿಂದ ವಿದ್ಯೆಯು ಲಭಿಸುತ್ತದೆ. ಆದರೆ ಅಂತಹವರಿಗೆ ಅನುಷ್ಠಾನ ಪ್ರಾಪ್ತವಾದರೆ ಫಲ ಖಂಡಿತ ಸಿದ್ಧಿಸುತ್ತದೆ. ಕುಲಕ್ರಮಾಗತರಾದ ಆಚಾರ್ಯರನ್ನು ಬಿಟ್ಟು ಇತರ ಆಚಾರ್ಯರನ್ನು ಆಶ್ರಯಿಸಿದರೆ ತ್ರಿಶಂಕುವಿಗೆ ಆದ ಫಲವೇ ದೊರೆಯುತ್ತದೆ.

ಶ್ರೀ ಭಗವದ್ರಾಮಾನುಜಾಚಾರ್ಯರು ವಿಶಿಷ್ಟಾದ್ವೈತ ಮತವನ್ನು ಅಭಿವೃದ್ಧಿ ಪಡಿಸಿದರೆಂಬುದು ಜಗತ್ ಪ್ರಸಿದ್ಧಿ. ಅನಂತರ ಅವರಲ್ಲಿ 74 ಸಿಂಹಾಸನಾಧಿಪತಿಗಳೂ, 700 ಸಂನ್ಯಾಸಿಗಳೂ ಇದ್ದರು. ಇವರುಗಳೆಲ್ಲರೂ ಮತಪ್ರಚಾರ ಮತ್ತು ಸಂಪ್ರದಾಯ ವಿಚಾರಗಳನ್ನು ಜನರಿಗೆ ತಿಳಿಸಿ ಆಚರಣೆಗೆ ತರುವಂತೆ ಉಪದೇಶ ಮಾಡುತ್ತಿದ್ದರು.

74 ಸಿಂಹಾಸನಾಧಿಪತಿ

ಶ್ರೀ ವೈಷ್ಣವರು — ವಿಶಿಷ್ಟಾದ್ವೈತಿಗಳು

ವೇದಾಂತ ಮಾರ್ಗದಲ್ಲಿ ಚಿದ-ಚಿದ್ವಿಶಿಷ್ಟವಾದ ಬ್ರಹ್ಮವನ್ನು ಅಂಗೀಕರಿಸಿದವರಾದ್ದರಿಂದ ಈ ದರ್ಶನಕ್ಕೆ ಸೇರಿದವರಿಗೆ ವಿಶಿಷ್ಟಾದ್ವೈತಿಗಳೆಂದು ಸಮುದಾಯದ ಹೆಸರು ಉಂಟಾಯಿತು.

## ಶ್ರೀ ವೈಷ್ಣವರು

ನಿತ್ಯ ನೈಮಿತ್ತಿಕ ಸಮಯಾಚಾರಗಳಲ್ಲಿ ಪಾಂಚರಾತ್ರ, ಸ್ಮೃತಿ ಮೂಲವಾದ ನಿಬಂಧನಗಳಂತೆ ಬಾಹ್ಯ ಚಿಹ್ನೆಗಳನ್ನುಧರಿಸಿ, ಮನೋವಾಕ್ಕಾಯಗಳಿಂದ ವಿಷ್ಣು ಪಾರಮ್ಯ ಪರರಾಗಿರುವುದರಿಂದ ಶ್ರೀವೈಷ್ಣವರುಗಳೆಂದು ಹೆಸರು ಬಂದಿತು.

74 ಸಿಂಹಾಸನಾಧಿಪತಿಗಳು

ಜ್ಞಾನ ಸಂತಾನ — ಶರೀರ ಸಂತಾನ

ಜ್ಞಾನ ಸಂತಾನವೆಂದರೆ-ಶಿಷ್ಯಾಚಾರ್ಯಕ್ರಮದಿಂದ ರಹಸ್ಯವಾದ ಉಭಯ ವೇದಾಂತಗಳನ್ನು ಅವಿಚ್ಛಿನ್ನವಾಗಿ ನಡೆಸಿಕೊಂಡು ಬರುವ ಪರಂಪರೆಯು.

## ಶರೀರ ಸಂತಾನವೆಂದರೆ-

ಬ್ರಹ್ಮಚರ್ಯವನ್ನು ಕಳೆದು ಸ್ನಾತರಾಗಿ, ಗೃಹಸ್ಥಾಶ್ರಮವನ್ನು ಅವಲಂಬಿಸಿ ದೇವತಾದಿ ಋಣತ್ರಯಗಳನ್ನು ಕಳೆಯುವವರ ಮೂಲಕ ಧರ್ಮ ಪ್ರತಿಷ್ಠೆಗಾಗಿ ಪ್ರಜೆಗಳನ್ನು ಪಡೆದು ಬರುವ ಪರಂಪರೆ.

# ಕುಲಕ್ರಮಾಗತ ಆಚಾರ್ಯರು

ಆಚಾರ್ಯರು ಯಾರು? ಹೇಗೆ? ಗುರುಶಿಷ್ಯ ಸಂಬಂಧ ಇವುಗಳನ್ನು ಈವರೆಗೂ ತಿಳಿಸಿದ್ದಾಯಿತು. (ಶ್ರೀ ಪಾಂಚರಾತ್ರೇ ಪರಮ ಪುರುಷ ಸಂಹಿತಾಯಾಂ)

*ಆಚಾರ್ಯೋ ದ್ವಿವಿಧಃ ಪ್ರೋಕ್ತಃ ಸರ್ವಶಾಸ್ತ್ರಾರ್ಥವೇದಿಭಿಃ|*
*ಕುಲಕ್ರಮಾಗತಃ ಪೂರ್ವಃ ಪ್ರತ್ಯಗಾತ್ಮ ಸ್ತಥಾ ಪರಃ||*

ಆಚಾರ್ಯ

ಕುಲಕ್ರಮಾಗತ ಆಚಾರ್ಯರು      ಪ್ರತ್ಯಗಾಚಾರ್ಯರು

ಎಂದು ಎರಡು ವಿಧವು

*"ಧರ್ಮದ್ವಾರಾ ಕರ್ಮ ಯಸ್ಮಾಂ ಜಾತೌ ತತ್ಕುಲ ಮುಚ್ಯತೇ" ಕುಲವೆಂದರೆ*
*"ಅವಿಚ್ಛಿನ್ನ ವಾಯು ಧರ್ಮಾಣಾಂ"*

ಎಂದರೆ, ವರ್ಣಾಶ್ರಮ ಧರ್ಮಗಳಿಗೆ ಹಾನಿ ಬರದಂತೆ ಭಗವತ್ಸ್ವೋಲ್ಲಾಸಕರವಾದ ಕರ್ಮವು ಯಾವ ಜಾತಿಯಲ್ಲಿರುವುದೋ ಅದಕ್ಕೆ ಕುಲವೆಂದೂ, ಪೂರ್ವೋಕ್ತ ಧರ್ಮವನ್ನು ಪರಂಪರೆಯಾಗಿ, ಅವಿಚ್ಛಿನ್ನವಾಗಿ, ಶಿಷ್ಯಾಚಾರ್ಯ ಕ್ರಮವಾಗಿ ಬರುವುದೇ ಸತ್ಕುಲವೆಂದು ಹೆಸರು.

ಮೇಲೆ ಹೇಳಿದ ಧರ್ಮಾನುಷ್ಠಾನಪರರು ಸಂಸಾರಿಗಳಿಗೆ ತತ್ತ್ವ ಬೋಧನಾರ್ಥವಾಗಿ, ಆಚಾರ್ಯರೂಪಿಯಾಗಿ ಭಗವದಂಶದಿಂದ ಅವತರಿಸಿ ಬಂದ ಪ್ರಕಾರವೇ ಆಗತ ಶಬ್ದಾರ್ಥ. ಈ ರೀತಿ ಪರಂಪರೆಯಾಗಿ ವೇದಾಂತ ರಹಸ್ಯತ್ರಯ ಮಂತ್ರೋಪದೇಶವನ್ನು ಮಾಡುವವರಿಗೆ ಕುಲಕ್ರಮಾಗತ ಆಚಾರ್ಯರೆಂದು ಹೆಸರು.

ಪ್ರತ್ಯಗಾಚಾರ್ಯರು

*"ಪ್ರಾಂಶಃ ವರಗತಿಜ್ಞಾನೋ ಜಿಜ್ಞಾಸಾ ಜಾಯತೇ ಯದಾ |*
*ತತ್ಕುಲ್ಯದೇಶಿಕಾಭಾವಾತ್ ಯಸ್ಯಮಿತ್ರಾಣಿ ಸಂಶ್ರಯೇತ್||*
*ತದಾನೀಮಸ್ಯ ದಯಯಾ ದೀಕ್ಷಾಸಂಸ್ಕಾರ ಪೂರ್ವಕಂ|*
*ಮಂತ್ರವ್ಯಾಖ್ಯಾಕೃದಾಚಾರ್ಯಃ ಪ್ರತ್ಯಗಾತ್ಮಾ ಸ ಉಚ್ಯತೇ||*

ಈ ವರೆಗೂ ತನ್ನ ಕುಲದಲ್ಲಿ ಆಚಾರ್ಯನಿಲ್ಲದ ಆ ವೈಷ್ಣವ ವಂಶದವನಾಗಿದ್ದು ಈಗ ಅರ್ಥ ಪಂಚಕ ಜ್ಞಾನದಿಂದ ಉಜ್ಜೀವಿಸಬೇಕೆಂಬುದಾಗಿ ನಿಶ್ಚಯಿಸಿ ಜಾಯಮಾನ ಕಾಲ ಭಗವತ್ಕಟಾಕ್ಷ ಪಾತ್ರನಾಗಿ, ಹೊಸದಾಗಿ ಸಮಿತ್ಪಾಣಿಯಾಗಿ ಸದಾಚಾರ್ಯರನ್ನು ಆಶ್ರಯಿಸಿ ಪಂಚ ಸಂಸ್ಕಾರ, ಮಂತ್ರೋಪದೇಶದಿಂದ ಶ್ರೀ ವೈಷ್ಣವತ್ವವನ್ನು ಹೊಂದಲು ಕಾರಣರಾದ ಆಚಾರ್ಯರಿಗೆ ಪ್ರತ್ಯಗಾಚಾರ್ಯರೆಂದು ಹೆಸರು. ಈವರೆಗೂ ಆ ಮನೆತನದಲ್ಲಿ ಕುಲಗುರುವಿಲ್ಲದೆ ಈಗ ಹೊಸದಾಗಿ ಮಾಡಿಕೊಳ್ಳುವ ಗುರುಗಳಿಗೆ ಪ್ರತ್ಯಾಗಾಚಾರ್ಯರೆಂದು ಹೆಸರು. ಇವರುಗಳಲ್ಲಿ ಕುಲಕ್ರಮಾಗತಾಚಾರ್ಯರೇ ಮುಖ್ಯರು ಮತ್ತು ಶ್ರೇಷ್ಠರು.

*"ಪುನಃ ಸಂಸ್ಕಾರ ಶುದ್ಧಾಶ್ಚ ಸ್ವರ್ಣವತ್ ಗತಕಲ್ಮಷಾಃ |*
*ಮಹಾತ್ಮನಾ ವಿವರ್ಧಂತೇ ರಾಜಂತೇ ಶಿಷ್ಯಕೋಟಯಃ ||*

ಎಂದು ಪ್ರಮಾಣವಿದೆ.

*"ಬಹುನಾತ್ರ ಕಿಮುಕ್ತೇನ? ಬ್ರಹ್ಮನ್ ವಿಸರ್ಜ್ಯತಪತಃ ಪ್ರಿಯಃ|*
*ನ ವೇದೈರ್ನಾಗಮೈಃ ಶಾಸ್ತ್ರೈರ್ನ ಪುರಾಣೈಸ್ಸ್ಮೃತಿವಿಸ್ತರೈಃ|*
*ಕುಲಕ್ರಮಾಗತಾಚಾರ್ಯತಿರಸ್ಕಾರಾಖ್ಯ ಪಾತಕಾತ್*
*ಬಧ್ಯತೇ ಮನುಜೋ ಮೂಢಸ್ಸರ್ವದುರ್ಗತಿ ಭಾಜನಃ||*

ವೇದ, ಪಾಂಚರಾತ್ರ, ಕರ್ಮಮೀಮಾಂಸಾ, ಸ್ಮೃತೀತಿಹಾಸ, ಪುರಾಣಾದಿಗಳನ್ನು ಓದಿದರೂ, ಅಶ್ವಮೇಧಾದಿ ಮಹಾಯಜ್ಞಾದಿಗಳನ್ನು ಮಾಡಿದರೂ ಜ್ಞಾನಯೋಗ -ಭಕ್ತಿಯೋಗ ಮೊದಲಾದ ತಪಸ್ಸುಗಳಿಂದಲೂ ಗಂಗಾದಿ ಪುಣ್ಯನದೀ ಸ್ನಾನದಿಂದಲೂ, ಮಹಾ-ಮಂತ್ರಜಪದ ಪುರಸ್ಸರವಾಗಿ ಎಷ್ಟು ಉಪಾಯವನ್ನು ಮಾಡಿದರೂ ಕುಲಕ್ರಮಾಗತಾಚಾರ್ಯರನ್ನು ತಿರಸ್ಕಾರ ಮಾಡಿ ಬಂದ ಪಾಪವು ಹೋಗುವುದಿಲ್ಲವು.

*"ತಸ್ಮಾತ್ ಸರ್ವಾತ್ಮನಾ ಬ್ರಹ್ಮನ್ ಕುಲಾಚಾರ್ಯ ಏವ ಪೂಜಯೇತ್*
*ಕರ್ಮಣಾ ಮನಸಾ ವಾಚಾ ನಿರ್ದೋಷಃ ಶುದ್ಧಿ ಮಾಪ್ನುಯಾತ್|*

ಸರ್ವ ಪ್ರಕಾರದಿಂದಲೂ ಮನೋವಾಕ್ಕಾಯ ಕರ್ಮದಿಂದ ಶುದ್ಧಿಯನ್ನು ಹೊಂದಿ ಇಹ-ಪರಗಳಲ್ಲಿ ಸುಖವನ್ನು, ಸಂತೋಷವನ್ನು ಹೊಂದುವರು.

"ಸದಾಚಾರ್ಯರು ಎಷ್ಟು ವಿಧವಿರುವರು"

ಸದಾಚಾರ್ಯರಲ್ಲಿ ಉತ್ತಾರಕರೆಂದೂ, ಉಪಕಾರಕರೆಂದೂ ಎರಡು ಪ್ರಕಾರಗಳು.

# ಅಪಚಾರಗಳು

*"ನಾಮ ಗೋತ್ರಾದಿ ಚರಣಂ ಕಾಲ ಕ್ಷೇತ್ರಶ್ರುತಂ ಬಲಮ್|*
*ವಯೋವೃತ್ತಂ ಶೀಲಮೇವಂ ಯಸ್ತು ಪೃಚ್ಛೇತ್ಸೈವ ಪತತಿ||*

ಯತಿಯ ಹೆಸರು ಗೋತ್ರ, ಸಂತತಿ, ದೇಶ ಕಾಲ. ಕುಲ, ವಿದ್ಯೆ, ವಯಸ್ಸು, ವೃತ್ತ, ಶೀಲ ಇವುಗಳನ್ನು ಕುರಿತು ಮಾತನಾಡಬಾರದು. ಮನೋವಾಕ್ಕಾಯಗಳಿಂದ ಏನಾದರೂ ಅಪಚಾರ ನಡೆದಿದ್ದೇ ಆದರೆ ಅದರಿಂದ ಉಂಟಾಗುವ ದುಷ್ಫಲ ಅನೇಕ.

*"ಅಪಮಾನೇ ಕೃತೇ ದೇವಾ ಸ್ಸರ್ವೇ ಹ್ಯೇವಾಪಮಾನಿತಾಃ|"*

ಇವರನ್ನು ಅಪಮಾನ ಗೊಳಿಸುವುದರಿಂದ ಸಕಲ ದೇವತೆಗಳನ್ನೂ ಅಪಮಾನ ಮಾಡಿದಂತೆ ಆಗುತ್ತದೆ.

*"ಸರ್ವೇಷಾಂ ಅಪರಾಧಾನಾಂ ಯತಿನಿಂದಾ ಗರೀಯಸೀ|*
*ಯತಿರ್ನಾರಾಯಣಃ ಸಾಕ್ಷಾತ್ ತಸ್ಮಾತ್ತಾಂ ಪರಿವರ್ಜಯೇತ್|*

ದೋಷಗಳಲ್ಲಿ ಸಂನ್ಯಾಸಿಯನ್ನು ನಿಂದಿಸುವ ದೋಷವು ಅತಿ ಪಾಪಕರವಾದದ್ದು, ಶ್ರೀಮನ್ನಾರಾಯಣನ ಸಾಕ್ಷಾತ್ ರೂಪವೇ ಯತಿ ಎನ್ನುವುದರಿಂದಲೂ ( ಈ ದೋಷಕ್ಕೆ ಪ್ರಾಯಶ್ಚಿತ್ತವಿಲ್ಲ) ಯತಿ ನಿಂದೆಯನ್ನು ಮಾಡಬಾರದು.

*"ಕರ್ಮಣಾ ಮನಸಾ ವಾಚಾ ಯೇ ಕುರ್ವಂತಿ ಸತ್ಕ್ರಿಯಾಮ್*
*ಸದಾಚಾರಪರಿಭ್ರಷ್ಟಾಸ್ತೇ ಪಾಪಾ ಯಾಂತ್ಯಧೋಗತಿಮ್||"*

ಮನೋವಾಕ್ಕಾಯಗಳಿಂದ ಯತಿಯನ್ನು ಸತ್ಕರಿಸದವರು ದುರ್ಭಾಗ್ಯರು. ತಾವು ಮಾಡುವ ಈ ಪಾಪದಿಂದ ಅಧೋಗತಿಯನ್ನು ಹೊಂದುತ್ತಾರೆ.

*"ಯತಿಹಸ್ತಗತಂ ದ್ರವ್ಯಂ ಗೃಹ್ಣೀಯಾತ್ ಜ್ಞಾನತೋ ಯದಿ?*
*ಅಧಸ್ಸನಯತೇ ಮೂಢಃ ಕುಲಾನಾಮೇಕವಿಂಶತಿಮ್||"*

ಸಂನ್ಯಾಸಿಯ ದ್ರವ್ಯವನ್ನು ಮನಃ ಪೂರ್ವಕವಾಗಿ ಅಪಹರಿಸಿದ್ದೇ ಆದರೆ ತನ್ನ 21 ಸಂತತಿವರೆಗೂ ರೌರವ ನರಕದಲ್ಲಿ ಬೀಳುತ್ತಾರೆ.

ಈ ವಿಚಾರದಲ್ಲಿ ಆಳವಂದಾರ್, ನಾಥಮುನಿಗಳು, ಎಂಬಾರ್, ಕೂರತ್ತಾಳ್ವಾನ್, ಇತ್ಯಾದಿ ಮುಂದಿನವರಿಗೂ, ಹಿಂದಿನವರಿಗೂ ಹೇಗೆ ರಾಮಾನುಜಾಚಾರ್ಯರು ಉತ್ತಾರಕಾಚಾರ್ಯರೆಂದು ಪರಿಗಣಿಸಲ್ಪಟ್ಟಿರುವರೋ ಅದೇ ರೀತಿಯಲ್ಲಿ, ಸ್ವಾಚಾರ್ಯರಾದ ನಂತರ ಬಂದ ಉತ್ತರಾಧಿಕಾರಿಗಳೂ ಸಹ ಉತ್ತಾರಕಾಚಾರ್ಯರಾದ್ದರಿಂದ ``ಗೋಬಲೀವರ್ದನ್ಯಾಯ" ದಂತೆ ಅವರೂ ಸಹ ನಮಗೆ ಸ್ವಾಚಾರ್ಯ ಸಮಾನರೇ ಆಗುವರು. ಆ ಆಚಾರ್ಯ ಪುತ್ರರೂ ಮುಂದಿನ ಉತ್ತರಾಧಿಕಾರಿ ಮಠಾಧಿಪತಿಗಳೂ ಇಬ್ಬರೂ ಸ್ವಾಚಾರ್ಯ ಸಮಾನರೇ.

ದೇವತೆಗಳಿಗೂ ಋಷಿಗಳಿಗೂ ಪಂಚ ಸಂಸ್ಕಾರವಾಗಿದೆಯೇ? ಪಂಚ ಸಂಸ್ಕಾರ, ರಹಸ್ಯತ್ರಯ ಮಂತ್ರೋಪದೇಶಗಳಿಲ್ಲದೆ ದೇವತೆಗಳಿಗಾಗಲಿ, ಋಷಿಗಳಿಗಾಗಲೀ ಪರಮಪದವು, ಭಗವತ್ಸಾನ್ನಿಧ್ಯವು ದುರ್ಲಭವು. ಆದ್ದರಿಂದಲೇ ಅವರುಗಳು ಕೂಡ ಸದಾಚಾರ್ಯರಿಂದ ಪಂಚ ಸಂಸ್ಕಾರ ಮಂತ್ರೋಪದೇಶವನ್ನು ಹೊಂದಿದ ಮೇಲೆಯೇ ಮೋಕ್ಷವನ್ನು ಪಡೆಯುತ್ತಾರೆ.

ಹೀಗೆ ಪಂಚ ಸಂಸ್ಕಾರವನ್ನು ಹೊಂದಿಯೇ ತೀರಬೇಕೆಂಬುದು ನ್ಯಾಯ ಸಿದ್ಧವೆಂಬುದನ್ನು ತಿಳಿಸಲು ದೇವತೆಗಳಿಗೂ, ಋಷಿಗಳಿಗೂ ಪಂಚಸಂಸ್ಕಾರವಾಗಿದೆ ಎಂಬುದನ್ನು ಸೂಚಿಸುವ ಪ್ರಬಲ ಪ್ರಮಾಣ.

*'ಭಗವಾನಪಿ ವಿಶ್ವಾತ್ಮಾ ಬ್ರಹ್ಮಾಣಂ ಭಕ್ತವತ್ಸಲಃ |*
*ಅಂಕಯತ್ ಶಂಖ ಚಕ್ರಾಭ್ಯಾಂ ತತ್ಪುತ್ರಂಚ ತದಂಶಜಂ ||*
*ದ್ವಯಂ ಚ ಮೂಲಮಂತ್ರಂ ಚ ಪ್ರದದೌ ಭಗವಾನ್ ದ್ವಯೋಃ ||*

ಎಂದರೆ ಭಕ್ತವತ್ಸಲನಾದ ಭಗವಂತನು ಬ್ರಹ್ಮನಿಗೂ, ಅವನ ಅಂಶದಿಂದ ಹುಟ್ಟಿದ ಬ್ರಹ್ಮ ಪುತ್ರನಾದ ನಾರದನಿಗೂ, ಶಂಖ-ಚಕ್ರಗಳಿಂದ ಮುದ್ರೆಯನ್ನೂ, ಅಷ್ಟಾಕ್ಷರಿ, ದ್ವಯ ಮಂತ್ರಗಳನ್ನೂ ಉಪದೇಶಿಸಿದನು.

**ಪಾದ್ಮೋತ್ತರೇ**

*"ಏವಮುಕ್ತ್ವಾ ವಿಧಾತಾರಂ ದೇವ ದೇವೋ ಜನಾರ್ದನಃ |*
*ಸಚಕ್ರೇಣಾಂಕಯಿ ತ್ವಾ ಚ ತಸ್ಮೈ ಮಂತ್ರಂ ದದೌ ಸ್ವಯಂ ||*
*ಎಂದರೆ ಶ್ರಿಯಃ ಪತಿಯು ಬ್ರಹ್ಮನೊಂದಿಗೆ*

ಮೇಲೆ ಹೇಳಿದ ವಿಧದಲ್ಲಿ ಬಲಿಚಕ್ರವರ್ತಿಗೆ ತನ್ನ ಚಕ್ರದಿಂದ ಮುದ್ರೆಯನ್ನು ಒತ್ತಿ ತಾನೇ ಸ್ವಂತವಾಗಿ ಮಂತ್ರೋಪದೇಶ ಮಾಡಿದನು.

ಪಾದ್ಮೋತ್ತರೇ-

"ಸರ್ವಲೋಕೇಶ್ವರೋ ದೇವೋ ಬ್ರಹ್ಮಾ ಮಮಪಿತಾ ಪ್ರಭುಃ
ಮಮಾಪಿ ವಿಧಿವನ್ಮಂತ್ರಂ ಪ್ರದದೌ ಮುನಿಸತ್ತಮಾಃ||
ತಸ್ಮಾದ್ಯೂಯಂ ಮುನಿಶ್ರೇಷ್ಠಾಃ ಧಾರಯಿತ್ವಾ ಸುದರ್ಶನಂ
ನಾರಾಯಣಪದದ್ವಂದ್ವಂ ಗಚ್ಛ ಶರಣಂ ದ್ವಿಜಾಃ|
ಇತ್ಯುಕ್ತಾ ಮುನಯಸ್ಸರ್ವೇ ನಾರದೇನ ಮಹರ್ಷಿಣಾ|
ದ್ವಯಾಧಿಕಾರಿಣಸ್ಸರ್ವೇ ಯಾತಾ ವಿಷ್ಣೋಃ ಪರಂಪದಂ|
ತಸ್ಮಾತ್ತ್ವಮಪಿ ದಾನವೇ ವಿಷ್ಣು ಸಾಯುಜ್ಯ ಮಿಚ್ಛಸಿ|
ದೀಕ್ಷಾ ಮಾರ್ಗ ವಿಧಾನೇನ ಧಾರಯಿತ್ವಾ ಸುದರ್ಶನಂ||
ನಾರಾಯಣ ಪದದ್ವಂದ್ವಂ ತದೇಕಂ ಶರಣಂ ವ್ರಜ|

ಓ ಋಷಿಗಳಿರಾ ನನ್ನ ತಂದೆಯಾದ ಬ್ರಹ್ಮದೇವರು ನನಗೂ ಶಾಸ್ತ್ರೋಕ್ತ ರೀತಿಯಿಂದ ಮಂತ್ರವನ್ನು ಉಪದೇಶಿಸಿದರು. ಆದ್ದರಿಂದ ನೀವೂ ಸುದರ್ಶನ ಚಕ್ರದಿಂದ ತಪ್ತ ಮುದ್ರಾಂಕಿತರಾಗಿ ಶ್ರೀಮನ್ನಾರಾಯಣನ ಚರಣಾರವಿಂದಗಳನಲ್ಲಿ ಶರಣು ಹೊಂದಿರಿ.

ಎಂದು ಮುನಿಗಳು ನಾರದರಿಂದ ಉಪದೇಶಿಸಲ್ಪಟ್ಟವರಾಗಿ ಅದೇ ರೀತಿಯಲ್ಲಿ ದ್ವಯ ಮಂತ್ರೋಪದೇಶವನ್ನು ಹೊಂದಿ ಪರಮ ಪದವನ್ನು ಹೊಂದಿದರು. ಆದ್ದರಿಂದ ಓ ದಾನವೇ?

ನೀನೂ ಸಹ ಶ್ರೀ ಮನ್ನಾರಾಯಣನ ಸಾಯುಜ್ಯವನ್ನು ಹೊಂದಲು ಆಸೆ ಪಡುವುದರಿಂದ ಶಾಸ್ತ್ರೋಕ್ತವಾಗಿ ದೀಕ್ಷಾವಿಧಿಯನ್ನನುಸರಿಸಿ ಸುದರ್ಶನ ಚಿಹ್ನೆಯನ್ನು ಧರಿಸಿ ಶ್ರೀಮನ್ನಾರಾಯಣನೇ ಫಲವೆಂದೂ, ಸಾಧನವೆಂದೂ ನಂಬುವವನಾಗು.

ಪರಾಶರ ಸಂಹಿತಾಯಾಂ-

"ವಸಿಷ್ಠೋ ಯಾಜ್ಞವಲ್ಕ್ಯಶ್ಚ ಶುಕಶ್ಚೈವ ಬೃಹಸ್ಪತಿಃ|
ಅತ್ರಿ ಬೋಧಾಯನೋ ವ್ಯಾಸೋ ಹಾರೀತೋ ವ್ಯಾಶ್ವಲಾಯನಃ||
ಕಾತ್ಯಾಯನ ಶ್ಶೌನಕಶ್ಚ ಆಪಸ್ತಂಬಾದಯ ಸ್ತಥಾ
ಸಾತ್ವತ-ಮುನಯಶ್ಚಾನ್ಯೇ ಋಷಯೋ ಹಾರಿತಾಸ್ತಥಾ|,
ಭಾರದ್ವಾಜಾದಿ ಮುನಯೋ ಗಾರ್ಗ್ಯ ಶ್ರೀವತ್ಸ ಕಾದಯಃ

*ಅಂಬರೀಷೋ ಯೌವನಾಶ್ವ ಶ್ಶಾಂಡಿಲ್ಯ ಶ್ಶರಮರ್ಷಣಃ॥*
*ಏತೇ ಶುದ್ಧಾಸ್ತಥಾ ಸರ್ವೇ ವೇದಮಾರ್ಗ ಪ್ರವರ್ತಕಾಃ|*
*ಏತದಾಚಾರ ನಿಷ್ಠಾಶ್ಚ ಸರ್ವದಾ ಕಮಲಾಸನ|*
*ತಸ್ಮಾತ್ತ್ವಮೇತ ದಾಚಾರ್ಯ ನಿತ್ಯಂ ಕುರು ಚತುರ್ಮುಖ॥*
*ಮತ್ಸಾಯುಜ್ಯಾದಿ ಸಿದ್ಧ್ಯರ್ಥಂ ಸರ್ವ ಬಂಧ ವಿಮುಕ್ತಯೇ*
*" ಏತದಾಚಾರನಿಷ್ಠಾ ಯೇ ಪ್ರಪನ್ನಾಸ್ತೇ ಮಹೋದಯಾಃ|*
*ಶ್ರೀಮತ್ಸೇನೇಶವತ್ಸರ್ವೇ ಮತ್ಪ್ರಿಯಾ ನಾತ್ರ ಸಂಶಯಃ*
*ಅನಂತೋ ವೈನತೇಯಶ್ಚ ತಥಾ ವೈಖಾನಸಾಸ್ತಥಾ|*
*ಏತೇ ಪ್ರಪನ್ನ ನಿಷ್ಠಾಶ್ಚ ಪಂಚ ಸಂಸ್ಕಾರ ಸಂಯುತಾಃ||*

**ಎಂದರೆ ಓ ಚತುರ್ಮುಖ**

ವಸಿಷ್ಠರು, ಯಾಜ್ಞವಲ್ಕ್ಯರು, ಶುಕರು, ಬೃಹಸ್ಪತಿ, ಶಕ್ತಿ ಬೋಧಾಯನರು, ವ್ಯಾಸರು, ಹಾರೀತರು, ಆಶ್ವಲಾಯನರು, ಕಾತ್ಯಾಯನರು, ಶೌನಕರು, ಆಪಸ್ತಂಬರು, ಇನ್ನು ಇಂಥಹ ಸತ್ವಗುಣ ಸಂಪನ್ನರಾದ ಹಾರೀತವಂಶೀಯರೂ, ಭಾರದ್ವಾಜಾದಿಗಳೂ, ಗಾರ್ಗ್ಯರೂ, ಶ್ರೀವತ್ಸರೂ, ಅಂಬರೀಷರೂ, ಯೌವನಾಶ್ವರೂ, ಶಾಂಡಿಲ್ಯರೂ, ಶರಮರ್ಷಣರೂ ಇವರೇ ಮೊದಲಾದ ವೇದಮಾರ್ಗ ಪ್ರವರ್ತಕರಾದ ಸದಾಚಾರ ಸಂಪನ್ನರೆಲ್ಲ ಶಾಸ್ತ್ರೋಕ್ತ ರೀತಿಯಲ್ಲಿ ಚಕ್ರಾಂಕಿತರಾಗಿ ಮಂತ್ರ ಮಂತ್ರಾರ್ಥವನ್ನು ಪಡೆದು ಶ್ರೀಮನ್ನಾರಾಯಣನೇ ಉಪಾಯೋಪೇಯ ನೆಂದು ನಂಬಿ ಶ್ರೀ ವಿಷ್ಣು ಸಾಯುಜ್ಯವನ್ನು ಹೊಂದಿದವರಾದ್ದರಿಂದ ನೀನೂ ಸಹ ಸಕಲ ಪ್ರಕೃತಿ ಬಂಧವನ್ನು ಬಿಟ್ಟು ಸಾಯುಜ್ಯವನ್ನು ಹೊಂದುವುದಕ್ಕೆ ಈ ಆಚಾರವಾದ ವೈಷ್ಣವ ದೀಕ್ಷೆಯನ್ನು ಅವಲಂಬಿಸು. ಆಚಾರ ಸಂಪನ್ನರೂ, ಉತ್ತಮ ಪ್ರಪನ್ನರೂ ಆದ ವಿಷ್ವಕ್ಸೇನಾದಿಗಳಂತೆ ಅಧಿಕ ಪ್ರಿಯರೆಂದು ಹೇಳುವುದರಲ್ಲಿ ಸಂಶಯವಿಲ್ಲ.

ಹೀಗೆಯೇ ಅಲ್ಲವೇ ಆದಿಶೇಷನೂ, ಗರುಡಾದಿಗಳೂ, ವೈಖಾನಸರೂ ಪ್ರಸನ್ನ ವೃತ್ತಿರಾಚಾಕಂ ಪ್ರಪನ್ನರಾಗಿ ಪಂಚ ಸಂಸ್ಕಾರವನ್ನು ಹೊಂದಿ ನನಗೆ ಪ್ರಿಯರಾದರು.

**ಪರಾಶರ ಸಂಹಿತಾಯಾಂ-**

*"ಪ್ರಪನ್ನಾಃ ಯದಿಹ ಶ್ರೇಷ್ಠಾಃ ಏತದುಕ್ತ ವಿಧಾನತಃ |*
*ನಿಷೇಕ ಬ್ರಹ್ಮ ಸಂಧಾನಾಂತಂ ಪಂಚ ಸಂಸ್ಕಾರ ಪೂರ್ವಕಂ ||*

*ಪ್ರಪನ್ನ ವೃತ್ತಿ ರಾಚಾರಂ ಸ್ವಯಂ ವ್ಯಕ್ತ ಸ್ಥಲಾದಿಷು|*
*ಅಗ್ರಹಾರೇ ಪತ್ತನೇ ವಾ ಗೃಹ ಗ್ರಾಮಾರ್ಚನಾದಿಷು|*
*ಆಚರೇ ನ್ಮೋಕ್ಷದೋ ವಿಪ್ರ ಸ್ವಗುರು ರ್ವೈಷ್ಣವ ಶ್ಚ ಚ|*
*ಪ್ರಪನ್ನಃ ಪರಮೈಕಾಂತೀ ಸಾತ್ವಿಕೋ ಬ್ರಾಹ್ಮಣೋತ್ತಮಃ||*
*ಸತ್ಯಂ ಸತ್ಯಂ ಪುನಸ್ಸತ್ಯಂ ಇವಮೇವ ಚತುರ್ಮುಖ*
*ಆಪಸ್ತಂಬಾ ಯಾಜ್ಞವಲ್ಕ್ಯಾ ಸ್ತಥಾ ವಾಜಸ ನೇಯಕಾಃ|*
*ಸಾಮಗಾಃ ಪಾಂಚರಾತ್ರಜ್ಞಾಃ ತಥಾಬೋಧ್ಯಾ ಶ್ವಲಾಯನಾಃ|*
*ಏತದಾಚಾರ ವಿಧಿನಾ ದ್ವಿಜಾದ್ಯಾಃ ಕುರ್ವತೇ ಸದಾ||*

**ಓ ಚತುರ್ಮುಖಾ !**

ಉತ್ತಮನಾದ ಪ್ರಪನ್ನನು ಈ ಸಂಹಿತೆಯಲ್ಲಿ ಹೇಳಿದ ಪ್ರಕಾರ ಪ್ರಪನ್ನನ ಆಚಾರವೆಂದು ನಿರ್ಣಯಿಸಲ್ಪಟ್ಟ ಪಂಚ ಸಂಸ್ಕಾರಗಳಿಂದ ದೀಕ್ಷಿತನಾಗಿ ಸ್ವಯಂ ವ್ಯಕ್ತ ಸ್ಥಳಗಳಲ್ಲಾಗಲೀ, ಗ್ರಾಮಾರ್ಚನೆಗಳಲ್ಲಾಗಲೀ ಪಂಚ ಸಂಸ್ಕಾರ ಪೂರ್ವಕವಾಗಿ ನಿಷೇಕ ಮೊದಲಾಗಿ ಬ್ರಹ್ಮ ಮೇಧಾಂತ ಸಂಸ್ಕಾರದವರೆಗೆ ಆಚರಿಸಿದ್ದೇ ಆದರೆ ಆತನು ಪವಿತ್ರನಾದ ವಿಷ್ಣುಭಕ್ತನಾಗಿ ಪರಮೈಕಾಂತಿ ಎಂದು ಕರೆಯಲ್ಪಡುವ ಭಗವದ್ಭಕ್ತನೂ, ಉತ್ತಮ ಬ್ರಾಹ್ಮಣನೂ ಆಗಿ ಆಚಾರ್ಯಸ್ಥಾನವನ್ನು ಅಲಂಕರಿಸುವುದರಲ್ಲಿ ಸಂದೇಹವಿಲ್ಲ. ಈ ಮಾತು ತ್ರಿಕರಣ ಶುದ್ಧಿಯಾಗಿಯೂ ಸತ್ಯವು. ಆಪಸ್ತಂಬರು, ಯಾಜ್ಞವಲ್ಕ್ಯರು, ವಾಜಸನೇಯಿಗಳು ಬೋಧಾಯನರು, ವೈಖಾನಸರು, ಆಶ್ವಲಾಯನರು, ಸಾಮವೇದೀಯರು, ಪಾಂಚರಾತ್ರೀಯರು ಇವರೇ ಮೊದಲಾದವರೆಲ್ಲಾ ಇದೇ ವಿಧವಾಗಿ ಸರ್ವದಾ ವೈಷ್ಣವ ದೀಕ್ಷೆಯನ್ನು ಪಡೆದು ಆಚರಿಸಿರುತ್ತಾರೆ.

*"ವಾಸುದೇವಃ ಸ್ವಯಂ ಪೂರ್ವಂ ಶ್ರೀ ಭೂ ನೀಳಾದಿಕಾಸ್ತಥಾ"*
*ಶಂಖ ಚಕ್ರಾಂಕನಂ ದತ್ವಾ ಪ್ರಗಾಢ ಸಂಪ್ರಯಚ್ಛತ||*
*ಅನಂತ ಗರುಡಾದೀನಾಂ ವಿಷ್ವಕ್ಸೇನಾದಯಸ್ತಥಾ|*
*ಚಕ್ರಾದ್ಯೈ ರಂಕನಂ ಕೃತ್ವಾ ಪೂರ್ವೋಕ್ತ ಚತುರಕ್ಷರಂ||*
*ಉಪದಿಶ್ಯ ತಥಾ ಬ್ರಹ್ಮ ನರನಾರಾಯಣಾಶ್ರಮೇ*
*ನರಸ್ಯ ತದ್ವೃತ್ತತ್ವಾ ಚ ವಸಿಷ್ಠಾದಿ ಮಹರ್ಷಿಣಾಮ್*
*ವೇದವ್ಯಾಸಸ್ಯ ಭಗಸ್ಯ ಶ್ವಕಾಂತ ಪುರವಾಸಿನಾಮ್"*

*ಚತುರ್ಮುಖಸ್ಯ ವಾಯೋಶ್ಚ ಸೂರ್ಯಚಂದ್ರಮಸೋರಪಿ*
*ಸ್ವಸ್ವ ಚಕ್ರಾದ್ಯಾಂಕೃತ್ವಾದದೌಚ ಚತುರಕ್ಷರೀಂ||*

ಪೂರ್ವದಲ್ಲಿ, ಶ್ರೀಮನ್ನಾರಾಯಣನು ಶ್ರೀ ಭೂ ನೀಳಾದಿಗಳಿಗೂ ಅನಂತ ಗರುಡಾದಿಗಳಿಗೂ ತಾನೇ ಸ್ವಂತವಾಗಿ ಚಕ್ರಾಂಕಿತವನ್ನು ಮಾಡಿ ಪ್ರಣವ ಮಂತ್ರೋಪದೇಶವನ್ನು ಮಾಡಿದನು. ಅದಲ್ಲದೆ ಬದರಿಕಾಶ್ರಮದಲ್ಲಿ ನರನಿಗೂ, ವಸಿಷ್ಠಾದಿ ಮಹರ್ಷಿಗಳಿಗೂ ವೇದವ್ಯಾಸರು, ಶಿವನು, ವೈಕುಂಠವಾಸಿಗಳು, ಬ್ರಹ್ಮ, ವಾಯು, ಸೂರ್ಯ-ಚಂದ್ರರು ಇವರನ್ನೆಲ್ಲಾ ತನ್ನ ಶಂಖ-ಚಕ್ರದಿಂದ ಪಂಚ ಸಂಸ್ಕಾರ ಮುದ್ರಿತರನ್ನಾಗಿ ಮಾಡಿ ಮಂತ್ರೋಪದೇಶವನ್ನು ಮಾಡಿದನು.

**ಶೇಷ ಸಂಹಿತಾಯಾಂ**

"ನೃಸಿಂಹೋ ಭಗವಾನ್ ಬ್ರಹ್ಮನ್ನಂತರ್ಯಾಮೀ ನೃಕೇಸರೀ|
*ಪ್ರಹ್ಲಾದಾಯ ಸ್ವಭಕ್ತಾಯ ಪ್ರಪನ್ನಾಯ ಮುಮುಕ್ಷವೇ|*
*ತಪ್ತ ಚಕ್ರಾಂಕನಂ ಕೃತ್ವಾ ತನ್ಮಂತ್ರಂ ಸಂಪ್ರಾಯಚ್ಛತಿ ||*

ಎಂದರೆ, ಸರ್ವಾಂತರ್ಯಾಮಿಯಾದ ಸರ್ವೇಶ್ವರನು ಲೋಕದಲ್ಲಿ ಭಕ್ತರನ್ನು ಸಂರಕ್ಷಿಸುವುದಕ್ಕಾಗಿ ನೃಸಿಂಹ ರೂಪದಿಂದ ಅವತರಿಸಿ ಹಿರಣ್ಯ ಕಶಿಪುವನ್ನು ಸಂಹಾರ ಮಾಡಿ ಶ್ರೀ ವೈಷ್ಣವನೂ, ಪ್ರಪನ್ನನೂ ಆದ ಪ್ರಹ್ಲಾದನಿಗೆ ತಪ್ತ ಚಕ್ರಾಂಕವನ್ನು ಮಾಡಿ ಪ್ರಸಿದ್ಧವಾದ ಮಂತ್ರ ರತ್ನವನ್ನು ಉಪದೇಶಿಸಿದನು.

ಇದಲ್ಲದೆ ಬ್ರಾಹ್ಮಣ ಸಾಮಾನ್ಯರೆಲ್ಲಾ ಈ ಪಂಚ ಸಂಸ್ಕಾರವನ್ನು ಹೊಂದಿಯೇ ತೀರಬೇಕೆಂಬ ವಿಧಿ ವಾಕ್ಯಕ್ಕೆ ಪ್ರತಿ ಧರ್ಮಶಾಸ್ತ್ರದಲ್ಲಿಯೂ ಅನೇಕ ಪ್ರಮಾಣಗಳು ಇರುವುವು.

*"ಸ್ವಯಂ ತೀರ್ಣ ಪರಾಂತಾರಯತಿ"*

ಎನ್ನುವ ನ್ಯಾಯವನ್ನನುಸರಿಸಿ ಈ ಧರ್ಮಶಾಸ್ತ್ರಕರ್ತರಾದ ಮಹರ್ಷಿಗಳು ತಾವು ಸ್ವಂತವಾಗಿ ಆಚರಿಸಿದ ಈ ಧರ್ಮಗಳನ್ನು ಇತರರಿಗೆ ನಿರ್ದೇಶಿಸಲು ಅವಕಾಶವಿಲ್ಲವಾದ್ದರಿಂದಲೂ ತಾವಾಚರಿಸದ ಧರ್ಮಗಳನ್ನು ಎಷ್ಟೇ ದೊಡ್ಡವರಾಗಿ ಎಷ್ಟು ವಿಧದಲ್ಲಿ ಹೇಳಿದರೂ ಇತರರಿಗೆ ಅವರಲ್ಲಿಯೂ, ಅವರ ಮಾತಿನಲ್ಲೂ ಹೇಗೆ ಪ್ರಾಮಾಣ್ಯವು

ವಿರ್ಚಾಡುವುದು? ಆದ್ದರಿಂದ ಪರಮ ಪ್ರಾಮಾಣಿಕ ಗ್ರಂಥಗಳಾದ ಸ್ಮೃತ್ಯಾದಿ ಧರ್ಮ ಶಾಸ್ತ್ರಗಳನ್ನು ರಚಿಸಿದ ಮಹರ್ಷಿಗಳು ಈ ಮಾತುಗಳನ್ನು ತಿಳಿಯದೆಯೇ ಈ ಗ್ರಂಥಗಳನ್ನು ಬರೆದರೆಂದು ಹೇಳಲು ಅವಕಾಶವೆಲ್ಲಿರುವುದು? ಆದ್ದರಿಂದ ಮೋಕ್ಷವನ್ನಪೇಕ್ಷಿಸಿದ ಮಹರ್ಷಿಗಳೆಲ್ಲರೂ ಕೂಡ ಈ ಪಂಚ ಸಂಸ್ಕಾರಗಳನ್ನು ಹೊಂದಿಯೇ ಪರಮಪದವನ್ನು ಸೇರಿದರೆಂದು ನಿರ್ಧಾರವಾಗಿ ವಾಚಕರಾದ ಭಾಗವತೋತ್ತಮರು ತಿಳಿಯುವುದು ಸೂಕ್ತ. ಇದಕ್ಕೆ ಇನ್ನೂ ಅನೇಕ ಪ್ರಮಾಣಗಳು ಪಾಂಚರಾತ್ರ ಆಗಮಗಳಲ್ಲಿ ದೊರೆಯುತ್ತವೆ.

# ದ್ವಾದಶೋರ್ಧ್ವಪುಂಡ್ರ

**ಪುಂಡ್ರ ಸಂಸ್ಕಾರವೆಂದರೇನು?**

ಸಮಾಶ್ರಯಣವೆಂಬ ಚಕ್ರಾಂಕಿತವಾದ ಅನಂತರ ಆಚಾರ್ಯರಿಂದ ಧಾರಣೆ ಮಾಡಲ್ಪಟ್ಟು, ಹನ್ನೆರಡು ನಾಮಗಳನ್ನು ಆಚಾರ್ಯರಿಂದ ಅನುಗ್ರಹಿಸಲ್ಪಟ್ಟು ಅನಂತರವೇ ಈ ರೀತಿ ಪುಂಡ್ರಧಾರಣೆ ಮಾಡಿಕೊಳ್ಳಲು ಅರ್ಹರಾಗುತ್ತಾರೆ.

ಊರ್ಧ್ವಪುಂಡ್ರವು ಪಂಚ ಸಂಸ್ಕಾರಗಳಲ್ಲಿ ಎರಡನೆಯದು. ಊರ್ಧ್ವ ಎಂದರೆ ಮೇಲುಗಡೆಗೆ ಧಾರಣ ಮಾಡುವುದು. ಪುಂಡ್ರ ಎಂದರೆ ಚಿಹ್ನೆ ಎಂದು. ಇವು ಎರಡು ರೇಖೆಗಳಾಗಿರುತ್ತವೆ. ಹೀಗೆ ಶ್ರೀವೈಷ್ಣವರುಗಳು ತಮ್ಮ ಹಣೆಯಲ್ಲಿ ನಾಸಿಕಾಗ್ರದಿಂದ ಕೇಶಪರ್ಯಂತ ಶ್ವೇತಮೃತ್ತಿಕೆಯಿಂದ ಧರಿಸುವ ಹರಿಪಾದಾಕೃತಿ!

ತಿರುಮಣ್ ಎಂದರೆ ಪುಂಡ್ರ -ತಿರುಮಣ್ -ಶ್ವೇತ ಮೃತ್ತಿಕೆ- ಕಾಪ್ಪು-ರಕ್ಷಾಬಂಧನ ಅಂದರೆ ದೇವಸ್ಥಾನದ ಕಟ್ಟಡ. ಈ ತಿರುಮಣ್ ಮಧ್ಯದಲ್ಲಿ ಶ್ರೀ ಜಗನ್ಮಾತೆಯ ಸಹಿತವಾಗಿ ಭಗವಂತನು ನಿವಾಸ ಮಾಡಲು ಕಟ್ಟಿರುವ ಕೋಯಿಲಾಳ್ವಾರ್. "ಕುಂಡಲೀಕೃತ ಸರ್ಪಸ್ಯ ಹರಿಪಾದಾಕೃತಿ: "ಎನ್ನುವಂತೆಯೇ ಆದಿಶೇಷನೆಂಬ ಅನಂತಾಳ್ವಾನ ಶಿರವಾದ ಪಾದಪೀಠದ ಮೇಲೆ ಹರಿಯ ಪಾದಾಕೃತಿಯಾದ ರೇಖೆಯುಳ್ಳ ಕಟ್ಟಡದ ಮಧ್ಯದಲ್ಲಿ ಜಗನ್ಮಾತೆ ಸಹಿತನಾದ ಪರಮಾತ್ಮನು ವಾಸಮಾಡುತ್ತಾನೆ. ಇದರಲ್ಲಿ ಮಕಾರವಾಚ್ಯವಾದ ತಿರುಅನಂತಾಳ್ವಾನ್ ಮೇಲೆ, ಉಕಾರವಾಚ್ಯೆಯಾದ ಪಿರಾಟ್ಟಿ ಅಲ್ಲಿಯೂ, ಅಕಾರವಾಚ್ಯನಾದ ಸರ್ವೇಶ್ವರನೂ, ತಿರುಮಣ್ ಎಂದರೆ ರಕ್ಷೆ ಎಂದು ಕರೆಯುತ್ತಾರೆ. "ಶ್ವೇತಮೃತ್ತಿಕಯಾ ವಿಪ್ರ: ಊರ್ಧ್ವಪುಂಡ್ರಾಣ್ ದ್ವಿಜೈ ಧಾರ್ಯಾಣ್ ವೈಷ್ಣವಸ್ಯ ವಿಶೇಷತ:"

ಎನ್ನುವಂತೆಯೇ ವಿಪ್ರೋತ್ತಮರಾದ ಆಚಾರ್ಯರುಗಳಿಂದ ಊರ್ಧ್ವಪುಂಡ್ರಗಳನ್ನು ಧಾರಣ ಮಾಡಿಸಿಕೊಳ್ಳಬೇಕಾದದ್ದು ಅತ್ಯಾವಶ್ಯಕ. ಅವರುಗಳೇ ಶ್ರೀ ವೈಷ್ಣವರುಗಳಾಗುವರು, ಊರ್ಧ್ವ ಪುಂಡ್ರಗಳನ್ನು ಧಾರಣ ಮಾಡದ ಶ್ರೀ ವೈಷ್ಣವರುಗಳು ವೈದಿಕ ಕಾರ್ಯಗಳಿಗೆ ಯೋಗ್ಯರಲ್ಲ. ಆದ್ದರಿಂದ ಈ ಊರ್ಧ್ವ ಪುಂಡ್ರ ಧಾರಣ ಅತ್ಯಾವಶ್ಯಕ. ಮತ್ತು ಶ್ರೀ ವೈಷ್ಣವ ಲಕ್ಷಣಕ್ಕೆ ಭೂಷಣ ಪ್ರಾಯವಾಗಿರುತ್ತದೆ.

"ಯೇ ವಾ ಲಲಾಟ ಫಲಕೇ, ಲಸದೂರ್ಧ್ವ ಪುಂಡ್ರಾಸ್ತೇ ವೈಷ್ಣವಾ' ಎನ್ನುವಂತೆಯೇ ಯಾರ ಹಣೆಯಲ್ಲಿ ಊರ್ಧ್ವಪುಂಡ್ರವಿದೆಯೋ ಅವನೇ ಶ್ರೀ ವೈಷ್ಣವನೆನ್ನಲ್ಪಡುತ್ತಾನೆ. ಎಂದು ಯಮನಿಂದ ಅವನ ದೂತರುಗಳಿಗೆ ತಿಳಿಸಲ್ಪಟ್ಟಿರುತ್ತದೆ. ಜಪ-ಹೋಮಗಳಿಂದ ಕಾರ್ಯಾಚರಣೆ ಮಾಡುವ ಉಪಾಸಕರುಗಳು ಊರ್ಧ್ವಪುಂಡ್ರವನ್ನು ಮೋಕ್ಷ ಸಾಧನವನ್ನಾಗಿ ಧರಿಸುತ್ತಾರೆ. ಅರ್ಥ ಬೋಧನೆಯಿಂದ ಸರ್ವೇಶ್ವರನೇ ಉಪೇಯೋಪೇಯವೆಂದಿರುವ ಪ್ರಪನ್ನರುಗಳು (ಪತಿವ್ರತೆಯರು ತನ್ನ ಪತಿಯ ಸಂತೋಷಾರ್ಥವಾಗಿ ಆಭರಣಗಳನ್ನು ಧರಿಸುವಂತೆ) ನಿತ್ಯಕರ್ಮದಲ್ಲಿ ಬಿಂದಾದ ಊರ್ಧ್ವಪುಂಡ್ರವನ್ನು ಭಗವಂತನ ಮುಖೋಲ್ಲಾಸಕ್ಕಾಗಿ ಧಾರಣೆ ಮಾಡುತ್ತಾರೆ.

ಎರಡು ಕಡೆಗಳಲ್ಲಿಯೂ ಊರ್ಧ್ವರೇಖೆಯುಳ್ಳ, ಕಟ್ಟಿನ ಮಧ್ಯದಲ್ಲಿ ಮಕಾರಾರ್ಥನಾದ ತಿರುಅನಂದಾಳ್ವಾನ ಮೇಲೆ, ಅಕಾರಾರ್ಥ ಭೂತನಾದ ಸರ್ವೇಶ್ವರನೂ, ಉಕಾರಾರ್ಥ ಭೂತೆಯಾದ ಜಗನ್ಮಾತೆಯೂ ನೆಲೆಸಿರುತ್ತಾರೆ. ಆದ್ದರಿಂದ ಕೋಯಿಲಾಳ್ವಾರ್ ಎಂದೂ ಕರೆಯುತ್ತಾರೆ. ತಿರುಮಣ್ ಕಾಪ್ಪಿನಲ್ಲಿ ಜೀವನೂ ಈಶ್ವರನೂ ವಿರಾಜಿಸುತ್ತಾ ಪ್ರಣವಾರ್ಥವನ್ನು ಪ್ರಕಾಶಪಡಿಸುತ್ತಿದ್ದಾರೆ. ಜೀವನು ಭಗವಂತನಿಗೆ ದಾಸ ಎನ್ನುವುದನ್ನು ತಿಳಿಸುತ್ತದೆ. ತಿರುಮಣ್ ಪ್ರಣವ ಸ್ವರೂಪವಾದ್ದರಿಂದ ಜೀವನೂ ಈಶ್ವರನೂ ಧರಿಸುವುದರಿಂದ ಪ್ರಣವಾರ್ಥ ಪ್ರಕಟವಾಗುತ್ತದೆ.

ಪೀಠವಿಲ್ಲದಿದ್ದರೆ ಪ್ರಣವ ಪ್ರಕಾಶವಾಗುವುದಿಲ್ಲ. ಪಾದದೊಂದಿಗೆ ಕೂಡಿರುವ ಪುಂಡ್ರವೇ ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುತ್ತದೆ. ತಿರುವನಂದಾಳ್ವಾನ್ ಪೀಠವಾಗಿ ಇರುವುದರಿಂದ ಲುಪ್ತಚತುರ್ಥಿಯು ಹಾಗೆ ಶೇಷ-ಶೇಷಿ ಭಾವವನ್ನು ತೋರಿಸುತ್ತದೆ. ನಾವು ಮೇಲೆ ನೋಡಿದ ಪುಂಡ್ರದಿಂದ ಶ್ರೀಮನ್ನಾರಾಯಣನು ಪರಮಪದದಲ್ಲಿ ಇರುತ್ತಾನೆಂಬುದನ್ನು ತೋರಿಸುತ್ತದೆ. ಭಗವಂತನು ತಾನು ಧರಿಸಿಕೊಂಡು ಶ್ರೀ ವೈಕುಂಠದಲ್ಲಿರುವುದನ್ನು ತಿಳಿಸುತ್ತಾನೆ. ಪ್ರಣವ ಸ್ವರೂಪ ಶ್ರೀಮನ್ನಾರಾಯಣನೇ ಎಂದು ಜೀವನೂ ಪರಮಾತ್ಮನೂ ತೋರಿಸುತ್ತಾರೆ.

ಇದೇ ತೆಂಕಲೆ ತಿರುಮಣ ತೆಂಕಲೆ ಎಂದರೆ ತಮಿಳು ಶಾಸ್ತ್ರ ದ್ರಾವಿಡವಾದ ತಮಿಳುವೇದ ಆಳ್ವಾರುಗಳು ಅನುಗ್ರಹಿಸಿರುವ ದಿವ್ಯ ಪ್ರಬಂಧಗಳು, ಆಳ್ವಾರುಗಳೆಲ್ಲರು ಪ್ರಪತ್ತಿಯಾದ ಶರಣಾಗತಿ ಮಾರ್ಗವನ್ನು ಅನುಷ್ಠಾನವಾಗಿ ಉಳ್ಳವರು ಅದನ್ನು ಅನುಸರಿಸಿದವರು ಶ್ರೀನಾಥಮುನಿ ಮೊದಲು ಶ್ರೀಮನ್ ಮಣವಾಳ್ ಮಾಮುನಿವರೆಗೆ ಇರುವ ಪೂರ್ವಾಚಾರ್ಯರುಗಳು, ಇದೇ ತಿರುಮಂತ್ರವೆಂಬ ಅಷ್ಟಾಕ್ಷರಿಯಲ್ಲಿ ಪ್ರಣವ ನಮಸ್ಸುಗಳಿಂದ ಹೇಳಲ್ಪಟ್ಟ, ಶೇಷತ್ವ ಪಾರತಂತ್ರ್ಯ ಸ್ವರೂಪಕ್ಕೆ ಸೂಕ್ತವಾದ ಮಾರ್ಗ ಅದನ್ನು ಅನುಸರಿಸಿದವರು ತೆಂಗಲೆಯವರು.

(ವಡಮೊಳಿ) ಸಂಸ್ಕೃತಶಾಸ್ತ್ರಗಳಲ್ಲಿ ಹೇಳಲ್ಪಟ್ಟ, ಕರ್ಮಜ್ಞಾನ ಭಕ್ತಿಯಾದ ಸ್ವತಂತ್ರ ಮಾರ್ಗದಲ್ಲಿಯೂ ಸ್ವತಂತ್ರ ಉಪಾಯಮಾರ್ಗದಲ್ಲು ಹೇಳುವವರು ವಡಕಲೆಯವರು. ಬ್ರಾಹ್ಮಣೇತರರಿಗೆ ಸಂಸ್ಕೃತವೇದದಲ್ಲಿ ಅಧಿಕಾರ ಇಲ್ಲವೆಂದು ಹೇಳುತ್ತಾರೆ.

ಶ್ರೀ ವೈಷ್ಣವವಾದ ವಿಶಿಷ್ಟಾದ್ವೈತ ಸ್ಥಾಪಕರಾದ ಸ್ವಾಮಿ ಭಗವದ್ರಾಮಾನುಜ ದರ್ಶನ ಎಂದು ಹೆಸರಿಟ್ಟು, ಶ್ರೀ ರಂಗನಾಥನು ನಿಶ್ಚಯಿಸಿದನು. ಶ್ರೀ ಭಗವದ್ರಾಮಾನುಜರ ಕಾಲದಲ್ಲಿ, ತಾವು ಇಷ್ಟಪಟ್ಟದ್ದು, ತಾನಾಗಿರುವುದೂ ಆದ ವಿಗ್ರಹ ಮೂರು. ಶ್ರೀಪೆರುಂಬೂದೂರಿನಲ್ಲಿ ತಾನಾಗಿರುವ ವಿಗ್ರಹದಲ್ಲೂ, ತಿರುನಾರಾಯಣಪುರದಲ್ಲಿ ತಾನಾಗಿ ಇಷ್ಟಪಟ್ಟ ವಿಗ್ರಹದಲ್ಲೂ ತಾನಾದ ಶ್ರೀರಂಗ ವಿಗ್ರಹದಲ್ಲೂ ತೆಂಕಲೈ ತಿರುಮಣ್ ಧರಿಸಿರುತ್ತಾರೆ. ಹನ್ನೆರಡು ಆಳ್ವಾರುಗಳೂ ಅವರುಗಳ ಅವತಾರ ಸ್ಥಳಗಳಲ್ಲಿ ಅವರುಗಳ ಹಣೆಯಲ್ಲಿ ತೆಂಕಲೈ ತಿರುಮಣ್ ಧರಿಸಿ ಕೊಂಡಿರುತ್ತಾರೆ. ಆಚಾರ್ಯಾಭಿಮಾನ ನಿಷ್ಠರಾದ ಮಧುರ ಕವಿಗಳ ಅವತಾರ ಸ್ಥಳವಾದ ತಿರುಕೋಳೂರಿನಲ್ಲೂ, ಆಂಡಾಳ್ ಅವತಾರ ಸ್ಥಳವಾದ ಶ್ರೀವಿಲ್ಲಿ ಪುತ್ತೂರಿನಲ್ಲೂ ತೆಂಕಲೈ ತಿರುಮಣ್ ಧರಿಸಿಕೊಂಡಿರುತ್ತಾರೆ.

ನಾಸಿಕಾಮೂಲದಲ್ಲಿರುವ ತಿರುವನಂದಾಳ್ವಾನಾಗಿರುವ ಪೀಠದ ಮೇಲೆ ಎರಡು ಕಡೆಯಲ್ಲೂ ಮದಿಳ್ ಹಾಗೆ ಎತ್ತರವಾದ ಪಾಳಿಗೋಡೆಯು ಹಾಗಿರುವ ಹರಿ ಪಾದಾಕೃತಿಯಾದ ಊರ್ಧ್ವರೇಖೆಯ ಮಧ್ಯದಲ್ಲಿ ಶ್ರೀ ಸಮೇತನಾದ ಸರ್ವೇಶ್ವರನು ಸಾನಿಧ್ಯದಲ್ಲಿರುವನೆಂದು ಪಾದ್ಮೋತ್ತರ ಪುರಾಣದಲ್ಲಿ ಹೇಳಿರುವಂತೆಯೇ, ಈ ಸ್ಥಳದಲ್ಲಿ ಚಿತ್ರರೂಪವಾಗಿ ಪ್ರಕಟಿಸಲ್ಪಟ್ಟಿರುತ್ತದೆ

ಮಧ್ಯದಲ್ಲಿ ಸ್ಥಳ ಬಿಡದೆ ಊರ್ಧ್ವಪುಂಡ್ರವನ್ನು ಧರಿಸಬಾರದು.





# ಸಮಾಶ್ರಯಣ

ಆಚಾರ್ಯರು- ಶ್ರೀ ವೈಷ್ಣವರಗಳು ಭಗವತ್ಸಂಬಂಧ ಸೂಚಕವಾಗಿ ತಮ್ಮ ಭುಜಗಳಲ್ಲಿ "ಅಗ್ನಿ ತಪ್ತೇನ ಚಕ್ರೇಣ ಬಾಹು ಮೂಲಿಷು ಲಾಂಛನಂ" ಎನ್ನುವ ಭಗವತ್ ಶಾಸ್ತ್ರದ ಪ್ರಕಾರ ಆಚಾರ್ಯರು ಹೋಮಾಗ್ನಿಯಿಂದ ತಾಪ ಮಾಡಿರುವ ಸುದರ್ಶನವೆಂಬ ಚಕ್ರ ಮತ್ತು ಶಂಖಗಳಚಿನ್ಹೆಗಳನ್ನು ಭುಜಗಳಲ್ಲಿಧಾರಣೆ ಮಾಡಿಕೊಳ್ಳುವುದು. ಇದನ್ನೇ ಸಮಾಶ್ರಯಣ ಅಥವಾ ಶಂಖ- ಚಕ್ರ ಮುದ್ರಾಧಾರಣೆ ಎನ್ನುತ್ತಾರೆ.

**ಶಿಷ್ಯ-** ಸಮಾಶ್ರಯಣವನ್ನು ಏತಕ್ಕಾಗಿ ಮಾಡಿಕೊಳ್ಳಬೇಕು?

**ಆಚಾರ್ಯರು-** ಭಗವತ್ಸಂಬಂಧವನ್ನು ಪಡೆಯಲು.

**ಶಿಷ್ಯ-** ಆದರೆ ಇಷ್ಟು ಕಾಲ ಭಗವತ್ಸಂಬಂಧ ಇರಲಿಲ್ಲವೇ?

**ಆಚಾರ್ಯರು-** ಉಂಟು, ಆದರೆ ಭಗವಂತನನ್ನು ಪಡೆದು ಮೋಕ್ಷಾನುಭವವನ್ನು ಹೊಂದಬೇಕೆಂಬ ಆಸೆ ನಿನಗಿರಲಿಲ್ಲ. ಈಗ ತಾನೇ ಆ ಸ್ಮರಣೆ ನಿನಗುಂಟಾಗಿದೆ. ಆದ್ದರಿಂದ ಭಗವತ್ಸಂಬಂಧ ಸೂಚಕವಾದ ಸಮಾಶ್ರಯಣವನ್ನು ಮಾಡಿಸಿಕೊಳ್ಳುತ್ತಿದ್ದೀಯೆ.

**ಶಿಷ್ಯ-** ಸಮಾಶ್ರಯಣ ಮಾಡಿಸಿಕೊಂಡ ಮಾತ್ರದಲ್ಲಿ ಭಗವತ್ಸಂಬಂಧ ಹೇಗೆ ಉಂಟಾಗುತ್ತದೆ?

**ಆಚಾರ್ಯರು-** ಲೋಕೋತ್ತಾರಕರಾದ ಭಗವದ್ರಾಮಾನುಜರ ಮೂಲಕ ಭಗವಂತನ ಹತ್ತಿರ ಇರುವ ಆಚಾರ್ಯರನ್ನು ನೀನು ಆಶ್ರಯಿಸಿದ್ದುವುದರಿಂದಲೂ, ನಿನ್ನ ತೋಳುಗಳಲ್ಲಿ ಶಂಕ-ಚಕ್ರ ಲಾಂಛನವಿರುವುದರಿಂದಲೂ ಭಗವತ್ಸಂಬಂಧ ಉಂಟಾಗುತ್ತದೆ.

**ಶಿಷ್ಯ-** ಭಗವಂತನ ಐದು ಆಯುಧಗಳೂ ಬೇಡವೇ?

**ಆಚಾರ್ಯರು-** ಶ್ರೀಮನ್ನಾರಾಯಣನು ಮೊದಲುಗೊಂಡು ನಮ್ಮ ಆಚಾರ್ಯರ ಪರ್ಯಂತ ಶಂಖ-ಚಕ್ರ ಲಾಂಛನ ಮಾತ್ರ ಶಿಷ್ಟಾಚಾರವಾಗಿ ಇರುವುದರಿಂದ, ಪಾಂಚರಾತ್ರಾಗಮನದಲ್ಲಿ ಭಗವನ್ನಿಯಮವಾಗಿರುವುದರಿಂದಲೂ ಯಮನು ತನ್ನ ದೂತನಿಗೆ ಶ್ರೀವೈಷ್ಣವ ಲಕ್ಷಣವನ್ನು ತಿಳಿಸುವಾಗ ಭುಜಗಳಲ್ಲಿ ಶಂಖ-ಚಕ್ರಗಳನ್ನು ಮಾತ್ರ ತಿಳಿಸಿರುವುದರಿಂದಲೂ ಈ ಎರಡು ಚಿನ್ಹೆಗಳೇ ಪರ್ಯಾಪ್ತ.

ಶಿಷ್ಯ- ಯಮನು ತನ್ನ ದೂತನಿಗೆ ಏನು ಹೇಳಿದನು?

ಆಚಾರ್ಯರು - ಯಮಲೋಕದಲ್ಲಿ ಯಮ- ಕಿಂಕರ ಸಂವಾದದಲ್ಲಿ ಶ್ರೀ ವೈಷ್ಣವ ಲಕ್ಷಣವನ್ನು ಕುರಿತು ಯಮನು ಹೇಳಿರುವುದೇನೆಂದರೆ-

*" ಯೇ ಬಾಹುಮೂಲ ಪರಿಚಿಹ್ನಿತ ಶಂಖ-ಚಕ್ರಾ।*
*ವೈಷ್ಣವಾಭುವನಮಾಶುಪವಿತ್ರಯಂತಿ"*

ಯೇಷಾ ಲಲಾಟ ಫಲಕೇಲಸದೂರ್ಧ್ವಪುಂಡ್ರಾಃ ತೇ ಎನ್ನುವಂತೆಯೇ (ಯಾವನ ಭುಜಗಳಲ್ಲಿ ಶಂಖಚಕ್ರವಿದೆಯೋ) ಅವನೇ ಶ್ರೀವೈಷ್ಣವನು ಅವನಿಂದಲೇ ಈ ಜಗತ್ತು ಪರಿಶುದ್ಧವಾಗಿರುತ್ತದೆ ಎಂದು ಯಮನು ತಿಳಿಸಿರುವುದರಿಂದ ಈ ರೀತಿ ಪಂಚ ಸಂಸ್ಕಾರವನ್ನು ಪ್ರತಿ ಒಬ್ಬರೂ ಮಾಡಿಕೊಳ್ಳಬೇಕು.

ಶಿಷ್ಯ- ಯಮನು "ಬಾಹುಮೂಲ ಪರಿಚಿಹ್ನಿತ ಶಂಖ ಚಕ್ರಾಃ" ಎಂದು ಭುಜಗಳಲ್ಲಿ ಶಂಖ-ಚಕ್ರದ ಗುರುತು ಹೇಳಲು ಮುಖ್ಯ ಕಾರಣ ಏನು?

ಆಚಾರ್ಯರು- ಚಕ್ರಾದಿ ಧಾರಣಮ್ ಪುಂಸಾಮ್ ಪರಸಂಬಂಧ ನಿವೇದನಮ್ ಪತಿವ್ರತಾ ನಿಮಿತ್ತಂಹಿ ವಲಯಾದಿ ವಿಭೂಷಣಮ್" ಎನ್ನುವಂತೆಯೇ ಆಭರಣಗಳು ಹೇಗೆ ಸುಮಂಗಲಿ ಎನ್ನುವುದನ್ನು ತಿಳಿಸುತ್ತವೆಯೋ ಹಾಗೆಯೇ ಶಂಖ ಚಕ್ರಾದಿ ಲಾಂಛನಗಳು ಪರಮಾತ್ಮನ ಸಂಬಂಧವನ್ನು ತಿಳಿಸುತ್ತವೆ. ಒಬ್ಬನಿಗೆ ಸಹಬಾಳ್ವೆ ಹೊಂದಿದ ಹೆಣ್ಣು ಕೈಬಳೆ- ಮಾಂಗಲ್ಯ ಅರಿಸಿನ ಮೊದಲಾದ ಮಂಗಳ ದ್ರವ್ಯವನ್ನು ಧರಿಸುವಂತೆಯೇ ಜೀವನು ಅವನಿಗೆ ಪತ್ನಿಯಾಗಿರುವುದರಿಂದ 'ಪತ್ನೀಕೆಯಾಯಿ ಮೂನ್ನು ತರದಾಯಿರುಪ್ಪದ್ದೂರು ಮಂಗಳ ಸೂತ್ರಂ ಕಟ್ಟುವುದರಿಂದಲೂ, ಉಕಾರದಲ್ಲಿ ಭರ್ತೃಭಾರ್ಯಾ ಸಂಬಂಧವನ್ನು ತಿಳಿಸಿರುವುದರಿಂದಲೂ ಸಮಾಶ್ರಯಣ ಮಾಡಿಕೊಳ್ಳುವುದು ಅತ್ಯವಶ್ಯಕ.

ಒಬ್ಬ ಕನ್ನಿಕೆಯನ್ನು ವಿವಾಹಕ್ಕೆ ಮೊದಲು ಅನೇಕರು ಆಸೆ ಪಡುತ್ತಾರೆ. ಆದರೆ ವಿವಾಹವಾಗಿ ಮಂಗಳ ಸೂತ್ರವನ್ನು ಧರಿಸಿದನಂತರ ಅವಳು ತನ್ನ ಪತಿಗೆ ಮಾತ್ರ ಸೇರಿದವಳು, ಇತರರು ಅವಳನ್ನು ಕಣ್ಣೆತ್ತಿ ನೋಡಲೂ ಸಹ ಅವಕಾಶವಿಲ್ಲವಾಗುವಂತೆ,- ಸಮಾಶ್ರಯಣವಾದ ಒಡನೆಯೇ ಕೇವಲ ಶ್ರೀಮನ್ನಾರಾಯಣನು ಮಾತ್ರ ಅಂಗೀಕರಿಸಲು ಅಧಿಕಾರ- ಇತರ ದೇವತಾಂತರಗಳು ತನ್ನ ವಸ್ತು ಇದು ಅಲ್ಲ, ಮೋಕ್ಷ ಸಾಮ್ರಾಜ್ಯವನ್ನು ನೀಡುವ ಮುಕುಂದನಿಗೆ ಮಾತ್ರ ಅಧಿಕಾರ ಎಂದು ದೂರ ಸರಿಯಲು ಕಾರಣವಾಗುತ್ತದೆ. ಆದ್ದರಿಂದ ಶಂಖ

ಚಕ್ರಧಾರಣೆಯನ್ನು ಅವಶ್ಯವಾಗಿ ಮಾಡಿಕೊಳ್ಳಬೇಕು. ಈ ರೀತಿ ಲಕ್ಷಣ ಉಳ್ಳವರು ಶ್ರೀವೈಷ್ಣವರೆಂದು ಅರ್ಥ.

ಶಿಷ್ಯ- ಆದರೆ ಶಂಖಚಕ್ರವಿದ್ಧವರಿಗೆ ಮಾತ್ರ ಭಗವತ್ಸಂಬಂಧ ಎನ್ನುವುದಕ್ಕೆ ಪ್ರಮಾಣವೇನು?

ಆಚಾರ್ಯರು- "ತಿರುಪಲ್ಲಾಂಡು" ಎನ್ನುವ ದಿವ್ಯಪ್ರಬಂಧದಲ್ಲಿ " ತೀಯಿಲ್ ಪೊಲಿಹಿನ್ರ" ಪಾಶುರದ ವ್ಯಾಖ್ಯಾನದಲ್ಲಿ "ಪೊರಿಯಾಳೊಯೊತ್ತುಂಡು ನಿನ್ರು" ಎನ್ನುವ ಚಿಹ್ನೆಯಿಂದ ಲಾಂಛಿತವಾಗಿ ನಿಂತು ಶಂಖ – ಚಕ್ರ ಚಿಹ್ನೆಯನ್ನು ಧರಿಸಿದ ಅನಂತರವೇ ಜೀವನು ಜನ್ಮಾಂತರಗಳಿಲ್ಲದೆ, ಲೋಕಾಂತರಗಳಿಗೆ ಹೋಗದ ಸುಸ್ಥಿರನಾಗಲು ಅರ್ಹನಾಗುತ್ತಾನೆ ಎಂದಿರುತ್ತದೆ. ಭಗವದಂಗೀಕಾರವೂ ಸಹ ಸಮಾಶ್ರಯಣವಾದ ಅನಂತರವೇ ಪ್ರಾಪ್ತ. ಶ್ರೀ ಕೃಷ್ಣಪರಮಾತ್ಮನು ದ್ವಾರಕೆಗೆ ಆಶ್ರಿತ ವಿರೋಧಿಗಳನ್ನು ನಿರಸನ ಮಾಡಲು ಹೊರಟಾಗ ದ್ವಾರಪಾಲಕರು ಭಗವಂತನಲ್ಲಿ ಪ್ರಾರ್ಥಿಸಿದರು: ತಾವುಬರುವವರೆಗೂ ನಾವು ಶ್ರೀ ವೈಕುಂಠವೆಂಬ ಈ ಪರಮಪದದ ಒಳಗೆ ಯಾರು-ಯಾರನ್ನು ಬಿಡಬಹುದು? ಮತ್ಯಾರನ್ನು ಬಿಡಬಾರದು? ಆಗ ಶ್ರೀ ಕೃಷ್ಣಪರಮಾತ್ಮನು ಹೇಳಿದನು- " ಚಕ್ರಾಂಕಿತಾಃ ಪ್ರವೇಷ್ಟವ್ಯಾಃ ಯಾವದಾಗಮನಂಮಮ ನಾಮುದ್ರಿತಾಃ ಪ್ರವೇಷ್ಟವ್ಯಾಃ ಯಾವದಾಗಮನಂಮಮ||" ಈ ಲಕ್ಷಣವುಳ್ಳವರು ನಿಶ್ಶಂಕೆಯಾಗಿ ಒಳಗೆ ಹೋಗಬಹುದು ಎಂದಿರುತ್ತಾನೆ. ಇದೇ ಈಶ್ವರ ಅಂಗೀಕಾರಕ್ಕೆ ಮುಖ್ಯವಾಗಿರುತ್ತದೆ. ಆದ್ದರಿಂದ ಪ್ರತಿ ಒಬ್ಬ ವೈಷ್ಣವನೂ ಸಹ ಶಂಖ ಚಕ್ರಧಾರಣ ರೂಪವಾದ ಸಮಾಶ್ರಯಣವನ್ನು ಪಡೆಯಬೇಕು.

ಶಿಷ್ಯ- ಬ್ರಾಹ್ಮಣರಲ್ಲದೇ ಇತರರಲ್ಲಿ ಏಕೆ ಸಮಾಶ್ರಯಣ ಮಾಡಿಸಿಕೊಳ್ಳಬಾರದು?

ಆಚಾರ್ಯರು- ಶಂಖ ಚಕ್ರ ಮುದ್ರಾಧಾರಣೆ ಮಾಡುವವರು ಬ್ರಾಹ್ಮಣರುಗಳಾಗಿಯೇ ಇರಬೇಕೆಂದು ಭಗವದಾಜ್ಞಾರೂಪವಾದ ಭಗವತ್ ಶಾಸ್ತ್ರದಲ್ಲಿ ಆಜ್ಞಾಪಿಸಿರುವುದರಿಂದ ಇತರರಿಗೆ ಸಮಾಶ್ರಯಣ ಮಾಡುವುದಕ್ಕೆ ಅಧಿಕಾರವಿಲ್ಲ, ಮತ್ತು ಅವರಿಂದ ಮಾಡಿಸಿಕೊಳ್ಳಬಾರದು.

ಶಿಷ್ಯ- ಇದಕ್ಕೆ ಪ್ರಮಾಣವೇನು?

ಆಚಾರ್ಯರು- ಉಂಟು. ಶ್ರೀರಾಮಾನುಜಾಚಾರ್ಯರು ತಿರುಕಚ್ಚಿ ನಂಬಿಗಳ ಹತ್ತಿರ ತಾವು ಅವರನ್ನು ಆಶ್ರಯಿಸಬೇಕೆಂದು ಅವರಲ್ಲಿ ಬಹಳವಾಗಿ ಪ್ರಾರ್ಥಿಸಿದರು. ಆದರೆ ಅವರು ಒಪ್ಪಿಕೊಳ್ಳಲಿಲ್ಲ. ಅನಂತರ ರಾಮಾನುಜರು ತಿರುಕಚ್ಚಿ ನಂಬಿಯವರಲ್ಲಿ ಪ್ರಾರ್ಥಿಸಿದರು, ನನಗೆ ಕೆಲವು ಸಂದೇಹಗಳುಂಟಾಗಿವೆ ವರದರಾಜನಲ್ಲಿ ಕೇಳಿ ತಿಳಿಸಬೇಕೆಂದು. "ಆಗ ತಿರುಕಚ್ಚಿ ನಂಬಿಗಳು ವರದರಾಜನಲ್ಲಿ ಬಿನ್ನವಿಸಿದಾಗ" ಪೂರ್ಣಾಚಾರ್ಯಂ ಸಮಾಶ್ರಯೇತ್" ಎಂದರೆ ಶ್ರೀ ಪೆರಿಯನಂಬಿಗಳನ್ನು ಆಶ್ರಯಿಸಿ ಎಂದು ಆಜ್ಞಾಪಿಸಿದರು. ಆದ್ದರಿಂದಲೇ ತಮಗೆ ಕಾಯಶುದ್ಧಿ ಮಾಡಿದ " ಪಿಳ್ಳೈ ಯುರುಂಗಾವಿಲ್ಲಿ ದಾಸರಿಗೆ ಸಮಾಶ್ರಯಣ ಮಾಡಿ ಎಂದು ಹೇಳಲಿಲ್ಲ. ತಾವೂ ಪೆರಿಯನಂಬಿಗಳಲ್ಲಿಯೇ ಆಶ್ರಯಿಸಿದರು.

ಶಿಷ್ಯ- ಆದರೆ ಯಾವ ಬ್ರಾಹ್ಮಣರಲ್ಲಿ ಬೇಕಾದರೂ ಆಶ್ರಯಿಸಬಹುದೇ?

ಆಚಾರ್ಯ- ಕೂಡದು- "ಆಚಾರ್ಯಾಣಾಮಸಾವಸಾವಿತ್ಯಾಭಗವತಃ ಆಚಾರ್ಯವಂಶೋಜ್ಞೇಯಃ" ಎನ್ನುವಂತೆಯೇ ಮೊದಲು ತಿಳಿಸಿದ ಆಚಾರ್ಯವಂಶವನ್ನು ವಿಚಾರಿಸಿ ಆ ಪರಂಪರೆಗಳಲ್ಲಿಯೇ ಆಶ್ರಯಿಸಬೇಕು.

ಶಿಷ್ಯ- ಆಚಾರ್ಯವಂಶದವರು ಎಂತಹವರಾದರೂ ಸರಿ ಆಶ್ರಯಿಸಬಹುದೇ?

ಆಚಾರ್ಯ- "ಜ್ಞಾನ ಹೀನಂ ಗುರುಮ್ ಪ್ರಾಪ್ಯ ಕುತೋ ಮೋಕ್ಷಮ್ ಅವಾಪ್ನುಯಾತ್" ಎನ್ನುವಂತೆಯೇ ಜ್ಞಾನವಿಲ್ಲದ ಗುರುವನ್ನು ಪಡೆದರೆ ನೀನು ಮೋಕ್ಷ ಸಾಮ್ರಾಜ್ಯವನ್ನು ಹೇಗೆ ಹೊಂದುತ್ತೀಯೆ? ದೊರಕುವುದಿಲ್ಲ. ಆದ್ದರಿಂದ "ಜ್ಞಾನ ಮನುಷ್ಠಾನಮಿವೈನನ್ನಾಗವೇ ಯುಡೆಯನಾನ ಗುರವೈಯಡೈಂದಕಾಲ್- "ಮಾನಿಲತ್ತೀರ್ ತೇನಾರ್‌ಕಮಲತ್ತಿರುಮಾಮಗಳ್ ಕೊಳುನನ್ ತಾನೇ ವೈಗುಂದಮ್ ತರುಮ್" ಎನ್ನುವಂತೆಯೇ ಜ್ಞಾನಾನುಷ್ಠಾನವುಳ್ಳ ಆಚಾರ್ಯನನ್ನು ಪಡೆದು ಸಮಾಶ್ರಯಣವೆಂಬ ಮುದ್ರಾಧಾರಣೆಯನ್ನು ಮಾಡಿಸಿಕೊಳ್ಳಬೇಕು. ಈ (ವಿಷಯವು ಆಚಾರ್ಯ ಪದವಿಚಾರವಿಮರ್ಶೆ) ಎಂಬ ಗ್ರಂಥದಲ್ಲಿ ವಿಸ್ತಾರವಾಗಿ ತಿಳಿಸಿದೆ. ಇದೆಲ್ಲವನ್ನು ಚೆನ್ನಾಗಿ ತಿಳಿದುಕೊಂಡ ಅನಂತರವೇ ನಿನಗೆ ಭಗವತ್ಸಂಬಂಧವೂ ಮತ್ತು ಜ್ಞಾನುಷ್ಠಾನಗಳು ಉಂಟಾಗುತ್ತದೆ ಇದೆಲ್ಲಾ ತಿಳಿದಿದ್ದರೆ ಶ್ರೀ ರಾಮಾನುಜಾಚಾರ್ಯರ ಹಾಗೆ ನೂರ ಇಪ್ಪತ್ತು ವರ್ಷ ಈ ಭೂಮಂಡಲದಲ್ಲಿ ಬಾಳಿ ಬದುಕಿ ಅನಂತರ ಮರಣವುಂಟಾದರೆ ಅರ್ಚಿರಾದಿ

ಮಾರ್ಗದಿಂದ ಪರಮಪದವಾದ ಶ್ರೀ ವೈಕುಂಠಕ್ಕೆ ಹೋಗಿ ಅಲ್ಲಿ ನಿತ್ಯ ಮುಕ್ತರೊಂದಿಗೆ ಬ್ರಹ್ಮಾನಂದವನ್ನು ಅನುಭವಿಸಬಹುದು.

ಈ ಸಂಬಂಧ ಉಂಟಾದ ಅನಂತರ ದಿವ್ಯ ಪ್ರಬಂಧಗಳನ್ನು ಇತರ ರಹಸ್ಯ ಗ್ರಂಥಗಳನ್ನು, ಆಚಾರ್ಯಮುಖೇನ ಕಲಿಯಬಹುದು.

ಶಿಷ್ಯ- ಶಂಖ-ಚಕ್ರಧಾರಣವಿಲ್ಲದಿದ್ದವರು ದಿವ್ಯಪ್ರಬಂಧಗಳನ್ನು ಮತ್ತು ರಹಸ್ಯ ಗ್ರಂಥಗಳನ್ನು ಏಕೆ ಕಲಿಯಬಾರದು?

ಆಚಾರ್ಯರು- ಪೆರಿಯಾಳ್ವಾರ್‌ರವರು ತಮ್ಮ ಗ್ರಂಥದಲ್ಲಿ "ತೀಯಿಲ್ ಪೊಲಿಗಿನ್ರ ಶೆಂಜುಡರಾಳಿ ತಿಗಳ್ ತಿರುಚಕ್ರತ್ತಿನ್ ಕೋಯಿಲ್ ಪೊರಿಯಾಲೇ ಒತ್ತುಂಡು ನಿನ್ರು ಅಡಿಮೈ ಶೆಯ್ಯವೇಂಡುಮ್" ಎಂದು ತಿಳಿಸಿರುವುದರಿಂದ ಶಂಖ ಚಕ್ರಧಾರಣೆ ಮಾಡಿಸಿಕೊಂಡ ಅನಂತರವೇ ದಿವ್ಯಪ್ರಬಂಧವನ್ನು ಕಲಿತು ವಾಚಕವಾಗಿ ಪಠಿಸಬಹುದು. "ಒತ್ತುಂಡು ನಿನ್ರು" ಎಂದು ಹೇಳಿರುವುದರಿಂದ ಮುದ್ರಾಧಾರಣೆ ಇಲ್ಲದವರಿಗೆ ದಿವ್ಯಪ್ರಬಂಧ ಕಲಿಯಲು ಅಧಿಕಾರವಿಲ್ಲ ಎನ್ನುವುದು ನಿಶ್ಚಯ!

ಶಿಷ್ಯ- ದಿವ್ಯ ಪ್ರಬಂಧವನ್ನು ರಚಿಸಿರುವ ಆಳ್ವಾರ್‌ರಿಗೆ ಶಂಖ ಚಕ್ರಧಾರಣೆ ಆಗಿತ್ತೆ?

ಆಚಾರ್ಯರು- ಆಗಿತ್ತು. ಶ್ರೀ ಸೇನೆಮುದಲಿಯಾರೆಂಬ ವಿಷ್ವಕ್ಸೇನರು ಈ ಭೂಮಂಡಲಕ್ಕೆ ಬಂದು ಆಳ್ವಾರ್‌ರಿಗೆ ಸಮಾಶ್ರಯಣ ಮಾಡಿರುತ್ತಾರೆ.

ಶಿಷ್ಯ- ಅವರ ಅನಂತರ ಪರಂಪರೆಯಾಗಿ ಬಂದಿರುವ ಆಚಾರ್ಯರುಗಳಿಗೆ ಸಮಾಶ್ರಯಣ ವಾಗಿದೆಯೇ?

ಆಚಾರ್ಯರು- ಆಗಿರುತ್ತದೆ. ಎಲ್ಲಾ ಆಳ್ವಾರ್‌ರುಗಳಿಗೂ ಅಂಗಿಯಾದ ನಮ್ಮಾಳ್ವಾರ್‌ರವರಿಗೂ, ಶ್ರೀಮನ್ನಾಥಮುನಿಗಳಿಗೂ, ನಾಥಮುನಿಗಳು ಉಯ್ಯಕೊಂಡಾರ್‌ರವರಿಗೂ, ಉಯ್ಯಕೊಂಡಾರ್‌ರವರು, ಶ್ರೀಮಣಕ್ಕಾಲನಂಬಿಗಳಿಗೂ ಶ್ರೀಮಣಕ್ಕಾಲ ನಂಬಿಗಳು ಶ್ರೀ ಯಾಮುನಾಚಾರ್ಯರಿಗೂ , ಶ್ರೀ ಆಳವಂದಾರ್ರು ಶ್ರೀ ಪೆರಿಯನಂಬಿಗಳಿಗೂ, ಪೆರಿಯನಂಬಿಗಳು ಶ್ರೀ ಭಗವದ್ರಾಮಾನುಜಾಚಾರ್ಯರಿಗೂ, ರಾಮಾನುಜಾಚಾರ್ಯರು 74 ಸಿಂಹಾಸನಾಧಿಪತಿಗಳಿಗೂ , ಎಂಬಾರವರು ಶ್ರೀ ಪರಾಶರ ಭಟ್ಟರಿಗೂ, ಭಟ್ಟರು ನಂಜೀಯರಿಗೂ, "ನಂಜೀಯರು ನಂಬಿಳ್ಳೈಯವರಿಗೂ, ನಂಬಿಳ್ಳೈಯವರು " ವಡಕ್ಕು ತಿರುವೀದಿ ಪಿಳ್ಳೈ" ಯವರಿಗೂ ವಡಕ್ಕು ತಿರುವೀದಿ ಪಿಳ್ಳೈಯವರು

ಶ್ರೀ ತಿರುವಾಯ್‌ಮೊಳಿ ಪಿಳ್ಳೈಯವರು ಮಣವಾಳ್ ಮಾಮುನಿಗೂ ಶ್ರೀ ಮಣವಾಳ್ ಮಾಮುನಿಗಳು ಅಷ್ಟ ದಿಗ್ಗಜರು ಮೊದಲುಗೊಂಡು ನಮ್ಮ ಪೂರ್ವಾಚಾರ್ಯರವರೆಗೆ ಶಂಖ ಚಕ್ರ ಧಾರಣ ಮಾಡಿಸಿ ಕೊಂಡು ಬರುತ್ತಿದ್ದಾರೆ. ಸಮಾಶ್ರಯಣವಾದ ಅನಂತರವೇ ದಿವ್ಯಪ್ರಬಂಧವನ್ನು ಕಲಿತು ವಾಚಿಕವಾಗಿ ಹೇಳುತ್ತಿರುವುದರಿಂದ ನಾವೆಲ್ಲರೂ ನಮ್ಮ-ನಮ್ಮ ಪರಂಪರಾಗತ ಆಚಾರ್ಯರ ಮುಖೇನ ಸಮಾಶ್ರಯಣ ಮಾಡಿಸಿಕೊಳ್ಳಬೇಕು.

ಶಿಷ್ಯ- ಶಂಖ-ಚಕ್ರ ಮುದ್ರಾಧಾರಣೆಯನ್ನು ಯಾರ ಹತ್ತಿರ ಮಾಡಿಸಿಕೊಳ್ಳಬೇಕು?

ಆಚಾರ್ಯರು- ಪರಂಪರಾಗತವಾಗಿ ಸಂಪ್ರದಾಯಾನುಸಾರವಾಗಿ ಬಂದ ಆಚಾರ್ಯರಲ್ಲಿಯೇ ಸಮಾಶ್ರಯಣ ಮಾಡಿಸಿಕೊಳ್ಳಬೇಕು. ನೂತನವಾಗಿ ಇತರರಲ್ಲಿ ಸಮಾಶ್ರಯಣ ಮಾಡಿಸಿಕೊಳ್ಳಬಾರದು.

ಶಿಷ್ಯ- ಹಾಗೆಯೇ ಮಾಡುತ್ತೇನೆ. ಆದರೆ ಯಾರು-ಯಾರು ಮುದ್ರಾಧಾರಣೆ ಮಾಡಿಸಿ ಕೊಳ್ಳಬಹುದು?

ಆಚಾರ್ಯರು- ಎಲ್ಲರೂ ಸಮಾಶ್ರಯಣ ಮಾಡಿಸಿಕೊಳ್ಳಬಹುದು. ಪ್ರತಿ ಒಬ್ಬರೂ ಸಹ ಮೋಕ್ಷ ಸಾಮ್ರಾಜ್ಯವನ್ನು ಹೊಂದಿ ಬ್ರಹ್ಮಾನಂದವನ್ನು ಅನುಭವಿಸಲು ಅರ್ಹರೇ.

ಶಿಷ್ಯ- ಶಂಖ-ಚಕ್ರ ಲಾಂಛನವಿಲ್ಲದ ಶರೀರವನ್ನು ಕುರಿತು ಶಾಸ್ತ್ರಗಳಲ್ಲಿ ಏನು ತಿಳಿಸಿರುತ್ತದೆ?

ಆಚಾರ್ಯರ- ಸಮಾಶ್ರಯಣವಿಲ್ಲದ ಶರೀರವನ್ನು ಕುರಿತು ಧರ್ಮಶಾಸ್ತ್ರಗಳಲ್ಲಿ ಅತ್ಯಂತ ನಿಷಿದ್ಧವಾಗಿ ತಿಳಿಸಿರುವ ಪ್ರಮಾಣವನ್ನು ತಿಳಿಸುತ್ತೇನೆ ಕೇಳು- "ವಿನಾ ಯಜ್ಞೋಪವೀತೇನ ವಿನಾ ಚಕ್ರಸ್ಯಧಾರಣಾತ್ ವಿನಾ ದ್ವಯೇನವ್ಯ ವಿಪ್ರಶ್ಚಂಡಾಳತ್ವ ಮವಾಪ್ನುಯಾತ್"

(ಚಕ್ರಧಾರಣವೆಂಬ ಸಮಾಶ್ರಯಣ ಸಂಸ್ಕಾರವೂ ದ್ವಯಾನುಸಂಧಾನವೆಂಬ ಮಂತ್ರ ಸಂಸ್ಕಾರವೂ ಇಲ್ಲದವನು, ಯಜ್ಞೋಪವೀತವಿಲ್ಲದ ಬ್ರಾಹ್ಮಣನ ಹಾಗೆ ಆಗುತ್ತಾನೆ.) " ವಿಧಿನಾ ಶಂಖ ಚಕ್ರಾದಿ ಧಾರಣಂಚೋರ್ಧ್ವ. ಪುಂಡ್ರಕಂ|| ಉಪವೀತಮ್ ಶಿಖಾಬಂಧಮ್ ವಿಪ್ರಸ್ಯ ಸತತಮ್ ಸ್ಮೃತಮ್" ಚಂಕ್ರ ಲಾಂಛನ ಹೀನಸ್ಯ ವಿಪ್ರಸ್ಯಮ್ ನಿಷ್ಫಲಮ್ ಭವೇತ್" ಶಾಸ್ತ್ರದಲ್ಲಿ ಹೇಳಿರುವ ಕ್ರಮದಂತೆ ಶಂಖ ಚಕ್ರಗಳನ್ನು ಧರಿಸಿ ಊರ್ಧ್ವ ಪುಂಡ್ರ ಯಜ್ಞೋಪವೀತ,

ಶಿಖೆ ಇವುಗಳನ್ನು ಸರ್ವಕಾಲದಲ್ಲಿಯೂ ಯಾರು ಧರಿಸಿರುತ್ತಾರೋ ಅವರೇ ಬ್ರಾಹ್ಮಣರೆನ್ನಲ್ಪಡುತ್ತಾರೆ. ಇವುಗಳೆಲ್ಲಾ ಶ್ರೋತ್ರಿಯನಾದ ಬ್ರಾಹ್ಮಣನಿಗೆ ಅತ್ಯಾವಶ್ಯಕವಾಗಿರಬೇಕೆಂದು ಧರ್ಮಶಾಸ್ತ್ರದಲ್ಲಿ ತಿಳಿಸಿರುತ್ತದೆ.

ಚಕ್ರಾಂಕಿತ ಚಿಹ್ನೆಯಿಲ್ಲದೆ ಇದ್ದರೆ ಅವನ ಬ್ರಾಹ್ಮಣತ್ವ ಯಾವ ಫಲವನ್ನೂ ಕೊಡಲಾರದು. ಆದ್ದರಿಂದ ಸಮಾಶ್ರಯಣವಿಲ್ಲದವನು ಧಾನಧರ್ಮವನ್ನು ತೆಗೆದುಕೊಳ್ಳಲು ಅರ್ಹನಲ್ಲ. "ಅಚಕ್ರಧಾರಿಣಮ್ ವಿಪ್ರಂ ಶ್ರಾದ್ಧೇ ಭೋಜಯೇನ್ನರಃ ರೇತೋ ಮೂತ್ರ ಪುರೀಷಾದೀನ್ ಸ ಪಿತೃಷ್ವ ಪ್ರಯಚ್ಛತಿ|" ಚಕ್ರಾಂಕಿತವಿಲ್ಲದ ಬ್ರಾಹ್ಮಣನನ್ನು ಯಾವ ಪುರುಷನು ಶ್ರಾದ್ಧದಲ್ಲಿ ನಿಮಂತ್ರಿಸಿ ಭೋಜನವನ್ನು ಮಾಡಿಸುತ್ತಾನೋ ಅವನು ತನ್ನ ಪಿತೃಗಳಿಗೆ ದ್ರೋಹ ಮಾಡಿದಂತಾಗುತ್ತದೆ.

ಶಿಷ್ಯ- ಪಂಚ ಸಂಸ್ಕಾರಗಳಲ್ಲಿ ತಾಪ ಸಂಸ್ಕಾರದ ವಿಚಾರವನ್ನು ವಿಸ್ತಾರವಾಗಿ ತಾವು ತಿಳಿಸಿದಿರಿ. ಇನ್ನು, ನಾವು ಶಿಷ್ಟಾಚಾರದಂತೆ ಭಗವದ್ಭಾಗವತಾಚಾರ್ಯ ಸಂಬಂಧವನ್ನು ಪಡೆಯಲು ತಾಪ ಪುಂಡ್ರ ನಾಮ ಮಂತ್ರ ಯಾಗ ಸಂಸ್ಕಾರಗಳನ್ನು ಪಡೆಯುತ್ತೇವೆ.

*ಹೀನೋ ಯಜ್ಞೋಪವೀತೇನ ವಿಪ್ರಾತ್ ಜ್ಞಾನ ಭಿಕ್ಷುಕಃ|*

# ಸ್ಮೃತಿಯಲ್ಲಿರುವ ಅಷ್ಟಾಕ್ಷರ ವಿವರಣೆ

"ಧೃತೋರ್ಧ್ವ ಬಾಹುರದ್ಯಾತ್ರ ಸತ್ಯಪೂರ್ವಂಭವೀಮಿ ವಃ|"
ಹೇ ಪುತ್ರ ಶಿಷ್ಯಾ ಶೃಣುತ ನ ಮಂತ್ರೋಽಷ್ಟಾಕ್ಷರಾತ್ಪರಃ||

"ಸರ್ವ ವೇದಾಂತ ಸಾರಾರ್ಥ ಸಂಸಾರಾರ್ಣವ ತಾರಕಃ|
ಗತಿರಷ್ಟಾಕ್ಷರೋ ನೃಣಾಂ ಅಪುನರ್ಭವ ಕಾಂಕ್ಷಿಣಾಂ||

" ನಾರಾಯಣೇತಿ ಶಬ್ದೋಽಸ್ತಿ ವಾಗಸ್ತಿ ವಶವರ್ತಿನೀ|
ತಥಾಪಿ ನರಕೇ ಘೋರೇ ಪತಂತೀತಿ ಕಿಮದ್ಭುತಂ||

"ಕಿಂ ತತ್ರ ಬಹುಭಿರ್ಮಂತ್ರೈಃ ಕಿಂ ತತ್ರ ಬಹುಭಿರ್ವ್ರತೈಃ|
ನಮೋ ನಾರಾಯಣೇತಿ ಮಂತ್ರಃ ಸರ್ವಾರ್ಥಸಾಧಕಃ||

"ನಾರಾಯಣಂ ಜಪೇ ನಿತ್ಯಂ ಪ್ರಣಮ್ಯ ಪುರುಷೋತ್ತಮಂ|
ಸ್ಮರನ್ ನಾರಾಯಣಂ ವಿಪ್ರಃ ಜಾಗ್ರತಶ್ಚ ಸನಾತನಂ||

"ಅಸ್ವಪನ್ ಸ್ವಪನ್ ಸ್ವಾಪಿ ನಮೋ ನಾರಾಯಣೇತಿ ವೈ|
ಭೋಜ್ಯಂ ಪೇಯಂ ಚ ಲೇಹ್ಯಂಚ ನಮೋ ನಾರಾಯಣೇತಿ ಯಃ||
ಅಭಿಮಂತ್ರ್ಯ ಸ್ಮರನ್ ಭುಂಕ್ತೇ ಸ ಯಾತಿ ಪರಮಾಂಗತಿಂ||

"ಆಸೀನೋ ವಾ ಶಯನೋ ವಾ ತಿಷ್ಠನ್‌ವಾ ಯತ್ರಕುತ್ರ ಚೇತ್|
ಗತಿ ರಷ್ಟಾಕ್ಷರೋ, ನೃಣಾಂ ಅಪುನರ್ಭವಕಾಂಕ್ಷಿಣಾಮ್||

"ಯಥಾ ಸರ್ವೇಷು ದೇವೇಷು ನಾಸ್ತಿ ನಾರಾಯಣಾತ್ಪರಃ|
ತಥಾ ಸರ್ವೇಷು ಮಂತ್ರೇಷು ನಾಸ್ತ್ಯಷ್ಟಾಕ್ಷರಾತ್ಪರಃ||
"ವ್ಯಕ್ತಂ ಭಗವಾನ್ ದೇವಃ ಸಾಕ್ಷಾನ್ನಾರಾಯಣಃ ಸ್ವಯಂ|
ಅಷ್ಟಾಕ್ಷರ ಸ್ವರೂಪೇಣ ಮುಖೇಷು ಪರಿವರ್ತತೇ|

ಬಹವೋಽಪಿ ಮಹಾತ್ಮಾನೋ ಮುನಯಸ್ಸನಕಾದಯಃ
ಅಷ್ಟಾಕ್ಷರಂ ಸಮಾಶ್ರಿತ್ಯ ಜಗ್ಮುರ್ವೈ ವೈಷ್ಣವಂ ಪದಮ್||

ಮಹಾಭಾರತ, ಅಶ್ವಮೇಧಪರ್ವ-

"ತಸ್ಮಾದಷ್ಟಾಕ್ಷರೋ ಮಂತ್ರಃ ಮದ್ಭಕ್ತೈರ್ಜಿತ ಕಲ್ಮಷೈಃ|
ಸಂಧ್ಯಾಕಾಲೇ ತು ಜಪ್ತವ್ಯಃ ಸತತಂ ಚಾತ್ಮ ಶುದ್ಧಯೇ|
ಏವಂ ಗುರ ಸಮಾರಭ್ಯ ಮಂತ್ರಾನುಷ್ಠಾನಮಾಚರೇತ್|
ಅಷ್ಟಾಕ್ಷರಂ ಜಪೇದ್ವಿದ್ವಾನ್ ನಿತ್ಯಮಷ್ಟಸಹಸ್ರಕಮ್||
"ಅಪವಿತ್ರ ಪವಿತ್ರೋವಾ ಸರ್ವಾವಸ್ಥಾಂಗತೋಪಿವಾ|
ಯಃ ಸ್ಮರೇ ತ್ಪುಂಡರೀಕಾಕ್ಷಂ ಸ ಬಾಹ್ಯಾಭ್ಯಂತರ ಶ್ಶುಚಿಃ

ಇನ್ನು "ಅ"ಕಾರ ವಾಚ್ಯನಾದ ಭಗವಂತನಿಗೇ ಸ್ವತಂತ್ರದವನಾದ "ಮ" ಕಾರವಾಚ್ಯನಾದ ನಾನು ಇರುತ್ತೇನೆ, ಎನ್ನುವ ಅನುಸಂಧಾನ ರೂಪವಾದ ಪ್ರಣವವಾಗಿರುವ ಮೊದಲ ಪದ ಕೈಂಕರ್ಯವಾಗಿರುವ ಪಯಿರು ಬೆಳೆಯುವುದಕ್ಕೆ ಚೇತನನಾಗಿರುವ ಗದ್ದೆಗೆ ತೆವರಿನ ಹಾಗೆ, ಸ್ವರೂಪ, ಉಪಾಯ, ಪುರುಷಾರ್ಥ ಎನ್ನುವ ಈ ಮೂರಕ್ಕೂ ವಿರೋಧಿಗಳನ್ನು ಹೋಗಲಾಡಿಸುವ ಮಧ್ಯಮ ಪದವಾದ "ನಮಃ" ಪದವು- ಆ ಪೈರಿಗೆ ಸ್ವಸ್ವಾತಂತ್ರ್ಯ (ತನಗೆ ತಾನೇ ಎನ್ನುವ ಭಾವನೆ) "ಅನ್ಯೋಪಾಯತ್ವಂ (ತನಗೆ ಇತರರು) (ತಾನೇ ರಕ್ಷಕನೆಂಬ ಭಾವನೆ) ಎನ್ನುವ ಕಳೆಗಳನ್ನು ತೆಗೆದು ಕೈಂಕರ್ಯವಾಗಿರುವ ಪೈರು ಬೆಳೆದು ಸ್ವಾಮಿಯಾದ ಭಗವಂತನಿಗೆ ಭೋಗ್ಯವಾಗುವುದನ್ನು ತೋರಿಸುತ್ತದೆ.

ಮೂರನೆಯದಾದ ನಾರಾಯಣ ಪದವು, ಆದ್ದರಿಂದ ಈ ರೀತಿಯಾಗಿ ಉಳುವವನಾದ ಭಗವಂತನು ಅನುಭವಿಸುವುದಕ್ಕಾಗಿ ಜೀವನಾಗಿರುವ ಗದ್ದೆ ( ಕ್ಷೇತ್ರಕ್ಕೆ) ಕೈಂಕರ್ಯವಾಗಿರುವ ಪೈರು ಬೆಳೆಯುವುದನ್ನು ತೋರಿಸುತ್ತದೆ- ಅಷ್ಟಾಕ್ಷರ ಮಂತ್ರ ಎಂದು ಅರ್ಥ.

ರಹಸ್ಯ ತ್ರಯಕ್ಕೂ, ತಾತ್ಪರ್ಯಗಳನ್ನೂ, ವಾಕ್ಯಾರ್ಥಗಳನ್ನೂ ಪ್ರಧಾನ ತಂತ್ರಗಳನ್ನೂ ಜೀವನು ಅನುಸಂಧಿಸಬೇಕಾದ ಸಾಧನಗಳನ್ನೂ ಈ ವಾರ್ತೆ ತಿಳಿಸುತ್ತದೆ. ಎಲ್ಲಾ ವೇದ ಶಾಸ್ತ್ರಗಳಿಂದಲೂ ಆದರಿಸಲ್ಪಟ್ಟಿದೆ ಎನ್ನುವುದೇ ಅಷ್ಟಾಕ್ಷರಕ್ಕೆ ತಾತ್ಪರ್ಯಾರ್ಥ.

# ದ್ವಯ ಮಂತ್ರದ ಹಿರಿಮೆ

ಲಕ್ಷ್ಮಿಯು ಭಗವಂತನು ಉಪಾಯನಾಗುವಾಗ ಪುರುಷಕಾರಳಾಗಿಯೂ, ಉಪೇಯನಾಗುವಾಗ ತಾನೂ ಉಪೇಯಳಾಗಿಯೂ ಕೈಂಕರ್ಯವನ್ನು ವೃದ್ಧಿಗೊಳಿಸುತ್ತಾಳೆ. ಅವನು ಜಗತ್ಕಾರಣವಾಗುವಾಗ ಇವಳೂ ಜಗತ್ ಸೃಷ್ಟಿ ಮುಂತಾದುವುಗಳಿಗೆ ಪ್ರೇರಣೆ ನೀಡುತ್ತಾಳೆ. ಜಗದ್ವ್ಯಾಪಾರದಲ್ಲಿ ಅಂತರ್ಯಾಮಿಯಾಗಿ ಅನ್ವಯಿಸುವವಳಾಗಿಯೂ ಅವನ ಪರ, ವ್ಯೂಹ, ವಿಭವ ಮತ್ತು ಅರ್ಚೆಯಲ್ಲಿಯೂ ಅವನನ್ನು ಬಿಟ್ಟು ಅಗಲದೆ ಇರುವುದರಿಂದ, ಮೀನು ಜಲಮಯ ವಾಗಿರುವಂತೆಯೇ ಭಗವಂತನ ರೂಪವೂ ಶ್ರೀಯುತವಾಗಿರುತ್ತದೆ ಎಂದು ಶ್ರೀ ನಾಥಮುನಿಗಳು ತಿಳಿಸಿರುತ್ತಾರೆ. ದ್ವಯದ ಎರಡು ಖಂಡಗಳಲ್ಲಿಯೂ ಶ್ರೀ ಶಬ್ದವು ಬಂದಿರುವುದರಿಂದ ಇದು ಪ್ರಕಟವಾಗುತ್ತದೆ.

A. ಈ ವಾರ್ತೆಯು ಪೂರ್ತಿಯಾಗಿ ದ್ವಯದ ಪ್ರಕಟನೆಯಾಗಿಯೂ, ಹಿರಿಮೆಯಾಗಿಯೂ ಇದೆ.

B. ಪ್ರಮಾಣದ ಸಾರವಾದ್ದರಿಂದ ದ್ವಯವು ಪ್ರಮಾಣವೆಂದೂ, ಅದಕ್ಕೆ ವಿಷಯವು ಅರ್ಚಾವತಾರವಾದ್ದರಿಂದ ಅದೇ ಪ್ರಮೇಯ ಎಂದೂ, ದ್ವಯದ ಅರ್ಥವನ್ನು ಅರಿತು ಉಪದೇಶಿಸುವವನು ಆಚಾರ್ಯನಾದ್ದರಿಂದ ಅವನೇ ಪ್ರಮಾತಾ ಎಂದೂ ಉಯ್ಯಕೊಂಡಾರ್ ತಿಳಿಸುತ್ತಾರೆ.

C. ಸಂಸಾರದ ವಿಷ ಅಂಟಿಕೊಂಡಿರುವವನಿಗೆ ದ್ವಯವು ವಿಷಯವನ್ನು ನಿವೃತ್ತಿಗೊಳಿಸುವ ಅಮೃತವಾಗಿರುತ್ತದೆ ಎಂದು ಮಣಕ್ಕಾಲ ನಂಬಿಯವರು ತಿಳಿಸಿರುತ್ತಾರೆ.

D. ಕುರುಡನಿಗೆ ಹುದುಗಿಟ್ಟ ಹಣ ಸಿಕ್ಕಿದ ಹಾಗೆ ನಮಗೆಲ್ಲಾ ದ್ವಯಂ ಎಂದು ಶ್ರೀ ಆಳವಂದಾರ್ ತಿಳಿಸಿರುತ್ತಾರೆ.

E. ಹಸಿವಿನಿಂದ ದುಃಖಿತನಾಗಿರುವವನಿಗೆ ಅಮೃತಪಾನ ಮಾಡಿದಂತೆ ಇರುತ್ತದೆ ದ್ವಯ ಎಂದು ತಿರುಮಾಲೈ ಆಂಡಾನ್ ತಿಳಿಸಿರುತ್ತಾರೆ.

F. ನವಜಾತ ಶಿಶುವಿಗೆ ಆಧಾರವಾದ ತಾಯಿಯ ಸ್ತನ್ಯದ ಹಾಗೆ ನಮಗೆಲ್ಲಾ ದ್ವಯ ಎನ್ನುತ್ತಾರೆ. ತಿರುಕೋಟ್ಟಿಯೂರ್ ನಂಬಿ.

G. ಪತಿವ್ರತೆಯಾದ ಸ್ತ್ರೀಗೆ ಮಂಗಳ ಸೂತ್ರದಂತೆ ನಮಗೆ ದ್ವಯ ಮಂತ್ರ.

H. ರಾಜನು ಕಂಠಕ್ಕೆ ಧರಿಸುವ ಹಾರದ ಹಾಗೆ ಎರಡು ಪಾದಗಳಿಗೂ ಧರಿಸುವ ಆಭರಣದ ಹಾಗೆ, ಪ್ರಪನ್ನನಿಗೆ ಎರಡು ವಾಕ್ಯವುಳ್ಳ ದ್ವಯವನ್ನು ಉಚ್ಚರಿಸುವುದು ಎಂದು ಭಾಷ್ಯಕಾರರು ತಿಳಿಸಿರುತ್ತಾರೆ.

I. ಅನಾದಿಕಾಲದಿಂದ ಸಂಸಾರ ಬಂಧನದಲ್ಲಿ ಬಿದ್ದು ಬಳಲುತ್ತಿರುವ ನಮಗೆ ಭಗವಂತನನ್ನು ಉಪಾಯನನ್ನಾಗಿ ತಿಳಿಯಪಡಿಸುವ ಈ ದ್ವಯ ಮಂತ್ರವು ಬಂಧನದಲ್ಲಿದ್ದವನಿಗೆ ಬಂಧನವನ್ನು ತುಂಡರಿಸಿ ಅವನ ಶಿರಸ್ಸಿನಲ್ಲಿ ಕಿರೀಟವನ್ನು ಧರಿಸುವಂತೆ; ಎಂದು ಎಂಬಾರ್ ತಿಳಿಸಿರುತ್ತಾರೆ.

J. ಸುಕುಮಾರನಾದ ರಾಜಕುಮಾರನು ತನ್ನ ನಾಲಿಗೆಯು ಒಣಗದೆ ಇರಲು ಆಗಾಗ್ಗೆ ಪಚ್ಚೆ ಕರ್ಪೂರವನ್ನು ಇಟ್ಟುಕೊಳ್ಳುವಂತೆ ದ್ವಯವಾಗಿರುವ ಪ್ರಪತ್ತಿ ಮಂತ್ರವನ್ನು ಉಚ್ಚರಿಸದಿದ್ದರೆ ನಾಲಿಗೆ ಒಣಗುತ್ತದೆ ಎಂದು ನಂಬಿಳ್ಳೆಯವರು ತಿಳಿಸುತ್ತಾರೆ.

K. ಉದಾರನಾದ ಚಕ್ರವರ್ತಿಯನ್ನು ನೋಡಲು ಹೋದಾಗ ಬರಿಗೈಯಲ್ಲಿ ಹೋಗಬಾರದೆಂದು, ಅವನು ಆಘ್ರಾಣಿಸಲು ಒಂದು ನಿಂಬೆಯ ಹಣ್ಣನ್ನು ತೆಗೆದುಕೊಂಡು ಹೋಗಿ, ಅವನ ಔದಾರ್ಯದಿಂದ ರಾಜ್ಯವನ್ನು ಬಹುಮಾನವಾಗಿ ಪಡೆಯುವಂತೆ ದ್ವಯವನ್ನು ಉಚ್ಚರಿಸಿ ಪರಮ ಪುರುಷಾರ್ಥ ಲಕ್ಷಣವಾದ ಮೋಕ್ಷವನ್ನು ಪಡೆಯುವುದು ವ್ಯಾಜವೆಂದು ಹೇಳಬಹುದಾಗಿರುತ್ತದೆ. ಎಂದು ತಿರುಕ್ಕುರುಕೈ ಪಿಳ್ಳಾನ್ ತಿಳಿಸಿರುತ್ತಾರೆ.

L. ಗುರುಪರಂಪರೆಯನ್ನು ಅನುಸಂಧಿಸದೆ ಪ್ರಪತ್ತಿ ಮಂತ್ರವಾದ ದ್ವಯವನ್ನು ಉಚ್ಚರಿಸುವುದು ಅನಧಿಕಾರಿಯ ಸಾಧನಾನುಷ್ಠಾನದ ಹಾಗೆ ಸ್ವರೂಪ ವಿರುದ್ಧ ಎಂದು ಮುದಲಿ ಆಂಡಾನ್ ತಿಳಿಸಿರುತ್ತಾರೆ.

M. ಕುರುಡನ ಕೈಲಿ ಅಪೇಕ್ಷಿಸಿದ್ದನ್ನು ಕೊಡುವ ಚಿಂತಾಮಣಿಯು ದೊರೆತ ಹಾಗೆ ಇರುವುದು, ಅನಾದಿಕಾಲವಾಗಿ ಅಜ್ಞಾನದಿಂದ ಬುದ್ಧಿ ಕುರುಡರಾದ ನಮಗೆ ದ್ವಯವು ದೊರೆತಿರುತ್ತದೆ ಎಂದು ಪಿಳ್ಳೆಯುರಂಗಾಪಿಳ್ಳಿ ದಾಸರು ತಿಳಿಸಿರುತ್ತಾರೆ.

ಆಚಾರ್ಯನು ಅಪೇಕ್ಷಿಸಿ ಹೇಳಿದ್ದಾನೆ ಎನ್ನುವುದು ದ್ವಯಕ್ಕೆ ತಾತ್ಪರ್ಯಾರ್ಥ. ಶರಣ್ಯನಾದ ಭಗವಂತನು ಒಪ್ಪಿ ಉಪದೇಶಿಸಿದ್ದು ಎನ್ನುವುದೇ ಚರಮಶ್ಲೋಕಕ್ಕೆ ತಾತ್ಪರ್ಯಾರ್ಥ. ಪ್ರಾಪ್ಯ ಸ್ವರೂಪವನ್ನು ನಿರೂಪಿಸುವುದು ಅಷ್ಟಾಕ್ಷರದ ವಾಕ್ಯಾರ್ಥ. ಕೈಂಕರ್ಯ ಪ್ರಾರ್ಥನೆಯೊಂದಿಗೆ ಮುಗಿಯುವುದರಿಂದ ಪ್ರಾಪ್ಯ- ಪ್ರಾಪಕಗಳೆರಡರ ಸ್ವರೂಪವನ್ನೂ ನಿರೂಪಿಸುವುದು ದ್ವಯದ ವಾಕ್ಯಾರ್ಥ.

ದ್ವಯದ ಎರಡೂ ವಾಕ್ಯಗಳೂ ಕ್ರಮಾನುಸಾರವಾಗಿ ಪ್ರಾಪಕವನ್ನೂ, ಪ್ರಾಪ್ಯವನ್ನೂ ನಿಷ್ಕರ್ಷಿಸುವುದರಿಂದ ಪ್ರಾಪಕ ಸ್ವರೂಪವನ್ನು ನಿಷ್ಕರ್ಷಿಸುವುದು ಚರಮ ಶ್ಲೋಕಕ್ಕೆ ವಾಕ್ಯಾರ್ಥವು. ತಾನು ಸರ್ವ ಪಾಪ ವಿಮೋಚನ ಮಾಡುವಂತೆ ಉಪಾಯಾಂತರಗಳನ್ನು ಬಿಟ್ಟು, ತನ್ನನ್ನೂ ಉಪಾಯವಾಗಿ ಆಶ್ರಯಿಸಲು ಹೇಳುವುದರಿಂದ ಅಷ್ಟಾಕ್ಷರಕ್ಕೆ ಸಂಗ್ರಹವಾದ ಪ್ರಣವವು, " ಅ" ಕಾರವಾಚ್ಯನಿಗೆ ಶೇಷ ಭೂತನಾಗಿರುವವನು " ಮ" ಕಾರವಾಚ್ಯನಾದ ಜೀವನು ಎಂದು ಆತ್ಮ ಸ್ವರೂಪವನ್ನು ನಿರೂಪಿಸುವುದರಿಂದ ಈ ಅಷ್ಟಾಕ್ಷರಕ್ಕೆ ಆತ್ಮ ಸ್ವರೂಪ ನಿರೂಪಣವೇ ಪ್ರಧಾನವಾಗಿರುತ್ತದೆ. ಮಿಥುನ ಕೈಂಕರ್ಯವನ್ನು ಪ್ರಾರ್ಥಿಸುವುದು ಮುಗಿಯುವುದರಿಂದ, ಅದರ ಪ್ರಾಧಾನ್ಯತೆಯನ್ನು ತೋರಿಸುವುದೇ ದ್ವಯಕ್ಕೆ ಪ್ರಧಾನ ಅರ್ಥವಾಗಿರುತ್ತದೆ.

ಸರ್ವಧರ್ಮಾನ್ ಪರಿತ್ಯಜ್ಯ
ಮಾಮೇಕಂ ಶರಣಂ ವ್ರಜ
ಅಹಂತ್ವಾ ಸರ್ವಪಾಪೇಭ್ಯೋ
ಮೋಕ್ಷಯಿಷ್ಯಾಮಿ ಮಾಶುಚಃ

# ಆಚಮನದಲ್ಲಿ ದ್ವಾದಶನಾಮಗಳು

ಸಂಧ್ಯಾವಂದನೆಯಲ್ಲಿ ಅನೇಕಸಾರಿ ಆಚಮನವನ್ನು ಮಾಡಬೇಕಾಗುತ್ತದೆ. ಸ್ತ್ರೀಯರೂ ಸಹ ಸ್ನಾನಾದಿಗಳಿಂದ ನಿವೃತ್ತರಾದ ಮೇಲೆ ಆಚಮನ ಮಾಡುವುದು ರೂಢಿ. ಆಚಮನದಿಂದ ಮನಃಶುದ್ಧಿ ಉಂಟಾಗುತ್ತದೆ ಎಂದು ಪೂರ್ವಿಕರ ಭಾವನೆ. ಈ ಆಚಮನದಲ್ಲಿ ಭಗವಂತನ ದ್ವಾದಶ ನಾಮದ ವಿವರಣೆಯು ಅಡಕವಾಗಿದೆ.

**1 ಕೇಶವಾಯನಮಃ-**

ಕೇಶವಾಯ ಎಂಬ ಈ ಶಬ್ದವು ದೇವರ ಸರ್ವೋತ್ತಮತ್ವವನ್ನು ಮತ್ತು ಕೊನೆಯದಾದ ದಾಮೋದರಾಯ ನಮಃ ಎನ್ನುವುದು ಇವನ ಸೌಲಭ್ಯವನ್ನು ತೋರಿಸುತ್ತದೆ.

`ಕಶ್ಚ ಈಶಶ್ಚ ಕೇಶವ' ಕೇಶೌ ಅನತೀತ ಕೇಶವಃ' ಬ್ರಹ್ಮಾ-ರುದ್ರರನ್ನು ಕಾಪಾಡುವವನು. ಇದಕ್ಕೆ ಶಿಷ್ಯನು ಒಂದು ಚಿಕ್ಕ ಹೆಸರನ್ನು ಹೇಳಿ ಎಂದನು.

**2. ಗುರು-ನಾರಾಯಣಾಯನಮಃ**

ನಾರಾಯಣನೆಂದರೆ ನಿತ್ಯಸೂರಿಗಳಿಗೆ ಒಡೆಯನು ಕ್ಷೀರಸಮುದ್ರದಲ್ಲಿ ಮಲಗಿರುವನೆಂದೂ, ಮನುಷ್ಯರಿಂದ ಆಶ್ರಯಿಸಲ್ಪಡತಕ್ಕವನೆಂದೂ ತಿಳಿದು ನಾರಾಯಣ ಶಬ್ದವನ್ನು ಉಚ್ಚಾರಣ ಮಾಡುವುದೇ ಮೋಕ್ಷಕ್ಕೆ ದಾರಿ ಎಂದನು.

ಆದಕ್ಕೆ ಶಿಷ್ಯನು ಸ್ವಾಮಿ-ನನಗೆ ಭಯವಾಗುತ್ತದೆ. ಇಷ್ಟು ದೊಡ್ಡವನು ಅಲ್ಪನಾದ ನನ್ನ ಪ್ರಾರ್ಥನೆಯನ್ನು ಹೇಗೆ ಸ್ವೀಕರಿಸುವನು ಎಂದು.

**3. ಗುರು-ಮಾಧವಾಯನಮಃ**

ಅವನು ಲಕ್ಷ್ಮೀಪತಿ. ಆದ್ದರಿಂದ ಲೋಕಮಾತೆಯು ಸದಾ ಅವನ ಹತ್ತಿರ ಇರುವಳು. ಮಕ್ಕಳ ಅಪರಾಧವನ್ನು ಮನ್ನಿಸಲು ತಾಯಿ ಜೊತೆಯಲ್ಲಿಯೇ ಇರುವಳು ಹೆದರ ಬೇಡ.

**4. ಗೋವಿಂದಾಯನಮಃ**

ಶಿಷ್ಯ-ಅವನು ಅಷ್ಟು ಸುಲಭನೇ, ಸ್ವಾಮಿ.

ಗುರು-ಅವನು ಗೋಪಾಲಕರೊಡನೆ ಆಡಿದವನು ಆದ್ದರಿಂದ ಯೋಚನೆ ಮಾಡಬೇಡ.

**5. ವಿಷ್ವಕ್ಸೇನಮಃ**

ಶಿಷ್ಯ-ನನಗೆ ಒಂದು ಸಂಶಯ ಸ್ವಾಮಿ. ನಾನು ಈ ಕೋಣೆಯಲ್ಲಿ ಕೂತು ನಾರಾಯಣ ಶಬ್ದವನ್ನು ಪಠನ ಮಾಡುತ್ತಿದ್ದರೆ ಅವನಿಗೆ ಹೇಗೆ ಗೊತ್ತಾಗಬೇಕು?

ಗುರು - `ಸರ್ವತ್ರ ವ್ಯಾಪ್ನೋತಿ ವಿಷ್ಣುಃ' ಅವನು ಎಲ್ಲಾ ಕಡೆಯಲ್ಲಿಯೂ ವಾಸಿಸುತ್ತಾನೆ. `ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ' ಎಂದು ಶ್ರುತಿಯು ಹೇಳುತ್ತದೆ. ಆದ್ದರಿಂದ ನಿನ್ನ ಪ್ರಾರ್ಥನೆಯು ಅವನಿಗೆ ತಿಳಿಯುತ್ತದೆ.

ಶಿಷ್ಯ- ಸ್ವಾಮಿ, ಇನ್ನೊಂದು ವಿಜ್ಞಾಪನೆ. ನನಗೆ ಜ್ಞಾನವಿರೋಧಿಗಳು ಅಸಂಖ್ಯಾತ. ಅವುಗಳನ್ನು ಹೇಗೆ ಗೆಲ್ಲಲಿ?

**6. ಗುರು-ಮಧುಸೂದನಾಯನಮಃ**

ಅವನು ವಿರೋಧಿಗಳನ್ನು ಸಂಹಾರಮಾಡಿ ಲೋಕ ಕ್ಷೇಮವನ್ನುಂಟುಮಾಡುವನು. ಅಂತಹವನು ನಿನ್ನ ಧ್ಯಾನ ವಿರೋಧಿಗಳನ್ನು ಹೋಗಲಾಡಿಸಿ, ಧ್ಯಾನವನ್ನು ಮುಂದುವರಿಸಲಾರನೇ?

ಶಿಷ್ಯ-ಹಾಗೆ ಅವನು ಪ್ರಪಂಚ ಸೃಷ್ಟಿಯಾದ ಮೇಲೆಯೂ ಮಾಡಿರುವನೇ?

**7.ಗುರು-ತ್ರಿವಿಕ್ರಮಾಯನಮಃ**

ಇಂದ್ರ ವಿರೋಧಿಯಾದ ಬಲಿಯನ್ನು ಅಡಗಿಸಲು ಮೂರು ಹೆಜ್ಜೆಗಳನ್ನು ಅವನಲ್ಲಿ ಯಾಚಿಸಿದನು. ಬಲಿಯು ಚಿರಂಜೀವಿಯಾದ್ದರಿಂದ ಅವನನ್ನು ಕೊಲ್ಲದೆ, ಮೂರನೆ ಹೆಜ್ಜೆಯಿಂದ ಪಾತಾಳಕ್ಕೆ ತಳ್ಳಿ ಅವನಿಗೆ ಸದಾ ದರ್ಶನ ಕೊಡುತ್ತಿರುವನು.

ಶಿಷ್ಯ-ಸ್ವಾಮಿ! ಅವತರಿಸುವಾಗಲೇ ಇಷ್ಟು ಆಕಾರವೇ ಗುರು?

**8. ಇಲ್ಲ ವತ್ಸ-'ವಾಮನಾಯನಮಃ'**

ಅವನು ವಾಮನನಾಗಿ ತೇಜೋಮಯ ಬ್ರಹ್ಮಚಾರಿಯಾಗಿ, ಬಲಿಯ ಬಳಿಗೆ ಹೋದನು. ಈತನ ನೈಷ್ಠಿಕ ಬ್ರಹ್ಮಚರ್ಯವನ್ನು ನೋಡಿ ಅವನು ಬೆರಗಾದನು.

ಶಿಷ್ಯ-ಸ್ವಾಮಿ ! ಮತ್ತೆ ಸಂಶಯ. ನೀವು ಮೊದಲು ಮಾಧವಾ ಎಂದು ಹೇಳಿದಿರಿ, ಈಗ ಬ್ರಹ್ಮಚಾರಿ ಎಂದು ಹೇಳುತ್ತೀರಲ್ಲಾ? '

**9. ಗುರು- 'ಶ್ರೀಧರಾಯನಮಃ'**

ಬ್ರಹ್ಮಚಾರಿಯ ವೇಷದಲ್ಲಿಯೂ, ಅವನ ವಕ್ಷಸ್ಥಲದಲ್ಲಿ ಲಕ್ಷ್ಮೀ ಇದ್ದಳು. ಆ ಲಕ್ಷ್ಮೀಯ ಕಟಾಕ್ಷ ಬಲಿಯ ಮೇಲೆ ಬೀಳದಂತೆ, ಕೃಷ್ಣಾಜಿನದಿಂದ ಅವಳನ್ನು ಮುಚ್ಚಿದನು. ನಿನ್ನ ಸಂಶಯ ಪರಿಹಾರವಾಯಿತೇ?

ಶಿಷ್ಯ-ಆದರೆ ನನ್ನ ಶರೀರದ ಇಂದ್ರಿಯಗಳೇ ನನಗೆ ಶತ್ರುಗಳಾಗಿವೆಯಲ್ಲಾ, ಸ್ವಾಮಿ! ಇದನ್ನು ಗೆಲ್ಲುವ ಬಗೆ ಹೇಗೆ?

**10. ಗುರು-ಹೃಷೀಕೇಶಾಯನಮಃ**

'ಹೃಷೀಕಂ ವಿಷಯೀಂದ್ರಿಯಂ' ಎಂಬುದು ಅಮರ ಕೋಶದ ವಾಕ್ಯ. ಹೃಷೀಕಾಣಾಂ ಈಶಃ ಹೃಷೀಕೇಶ ಇಂದ್ರಿಯಗಳಿಗೆ ಒಡೆಯನು. ಆದ್ದರಿಂದ ನಿನ್ನ ಇಂದ್ರಿಯಗಳನ್ನು ನಿನ್ನ ಧ್ಯಾನವಿರೋಧ ಮಾಡದಂತೆ ಹತೋಟಿಯಲ್ಲಿಡಿಸಲು ಅವನು ಯಜಮಾನ. ಆ ಯೋಚನೆಯೂ ಬೇಡ.

ಶಿಷ್ಯ-ಈ ರೀತಿ ಹಿಂದೆ ಯಾರಿಗೆ ಮಾಡಿರುವನು?

**11. ಗುರು-ಪದ್ಮನಾಭಾಯನಮಃ**

ನಾಭಿ ಕಮಲದಲ್ಲಿ ಹುಟ್ಟಿದ ಬ್ರಹ್ಮದೇವನಿಗೆ ಸಾವಿರ ವರ್ಷ ತಪಸ್ಸು ಮಾಡಲು ಏಕಾಗ್ರತೆಯನ್ನು ಕೊಟ್ಟು, ತನ್ನ ದಿವ್ಯಮಂಗಳ ವಿಗ್ರಹವನ್ನು ದರ್ಶನ ಮಾಡಿಸಿದನು. ಆದ್ದರಿಂದ ನಿನ್ನ ಧ್ಯಾನದಿಂದ ನಿನಗೆ ದೇವರ ದರ್ಶನ ಲಭಿಸುವುದು.

**12. ದಾಮೋದರಾಯನಮಃ**

'ದಾಮ ಉದರೇ ಯಸ್ಯಸಃ ದಾಮೋದರಃ' ಹಗ್ಗವನ್ನು ಹೊಟ್ಟೆಯಲ್ಲಿ ಉಳ್ಳವನು. ಒಂದು ಸಲ ಶ್ರೀಕೃಷ್ಣನು ತಾಯಿಯ ಹತ್ತಿರ ಸ್ತನ್ಯಪಾನವನ್ನು ಮಾಡುತ್ತಿದ್ದಾಗ ಒಲೆಯಲ್ಲಿಟ್ಟ ಹಾಲು ಉಕ್ಕಿಬರಲು ಶಿಶುವನ್ನು ಕೆಳಗೆ ಬಿಟ್ಟು ಹೋದಳು. ಆಗ ಶ್ರೀಕೃಷ್ಣನು ಕಡೆಗೋಲಿನಿಂದ ಮೊಸರು ಗಡಿಗೆಯನ್ನು ಒಡೆದು ಹಾಕಿದನು. ಅದನ್ನು ಕಂಡು ಯಶೋಧೆಯು ಹಗ್ಗವನ್ನು ತಂದು ಕೃಷ್ಣನನ್ನು ಒರಳ ಕಲ್ಲಿಗೆ ಕಟ್ಟಿಹಾಕಿದಳು. ಅವನು ಅಷ್ಟು ಸುಲಭನಪ್ಪ. ಇದನ್ನೇ ಶ್ರೀಮಧುರ ಕವಿ ಆಳ್ವಾರ್ರು ತಮ್ಮ 'ಕಣ್ಣಿನುಣ್ ಶಿರುತ್ತಾಂಬು' ಗ್ರಂಥದಲ್ಲಿ ಅವನ ಸೌಲಭ್ಯವನ್ನು ಕೊಂಡಾಡಿರುವರು. ಇದೇ ಆಚಮನದ ಪ್ರಭಾವ.

ಶ್ರೀ

# ಮಠಾಧಿಪತಿಗಳು ಮತ್ತು ಸಂನ್ಯಾಸಿಗಳ ಪರಂಪರೆ

ಶ್ರೀ|| ಆದಿಶಂಕರಾಚಾರ್ಯರು ಹಿಂದೂಧರ್ಮವನ್ನು ರಕ್ಷಿಸಿದವರಲ್ಲಿ ಮೊದಲಿಗರು. ಅವರು ಭಾರತದಾದ್ಯಂತ ಕನ್ಯಾಕುಮಾರಿಯಿಂದ, ಹಿಮಾಲಯದವರೆಗೆ ಸುತ್ತಾಡಿ ಧರ್ಮ ಪ್ರಚಾರ ಮಾಡಲು ಮಠಗಳನ್ನು ಸ್ಥಾಪಿಸಿದವರಲ್ಲಿ ಪ್ರಥಮ ಸಂನ್ಯಾಸಿ.

ಅವರ ಅಧಿಕ ಪರಿಶ್ರಮ ಮತ್ತು ಧಾರ್ಮಿಕ ಶ್ರದ್ಧೆಯ ಫಲವಾಗಿ ಅದ್ವೈತ ಮತ ಪ್ರಚಾರ ಈವರೆವಿಗೂ ಮಠಾಧೀಶರು ಮತ್ತು ಸನ್ಯಾಸಿಗಳಿಂದ ಮುಂದುವರಿಯುತ್ತಿದೆ.

ಅನಂತರ ಶ್ರೀ ಭಗವದ್ರಾಮಾನುಜರು ತಮಿಳುನಾಡಿನಿಂದ ಕರ್ನಾಟಕಕ್ಕೆ ಆಗಮಿಸಿದರು. ಇವರು ಭಗವಂತನ ಭಕ್ತರೆಲ್ಲಾ ಒಂದೇ ಎಂದು ಮತ್ತು ಸಮಾಜದಲ್ಲಿ ಅನೇಕ ಸುಧಾರಣೆಗಳನ್ನು ಮಾಡಿದರು. ಅನೇಕ ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡಿ ಪಂಚ ನಾರಾಯಣರನ್ನು ಪುನಃ ಪ್ರತಿಷ್ಠಾಪಿಸಿದರು. ದೇವಾಲಯಗಳಲ್ಲಿ ಭಗವಂತನ ದರ್ಶನಕ್ಕೆ ಹರಿಜನ- ಗಿರಿಜನರಾದಿ ಎಲ್ಲರಿಗೂ ಅವಕಾಶ ನೀಡಿದರು. ಅಸ್ಪೃಶ್ಯರು ಎಂದಿದ್ದವರನ್ನು ತಿರುಕುಲತ್ತಾರ್ ಎಂದರೆ ಶ್ರೇಷ್ಠ ಕುಲದವರೆಂದು ಅವರೆಲ್ಲರಿಗೂ ಭಗವಂತನ ಸೇವೆ ಮಾಡಲು ಅವಕಾಶ ಮಾಡಿಕೊಟ್ಟವರಲ್ಲಿ ಪ್ರಥಮ ಸಂನ್ಯಾಸಿ

ಇವರು ಬ್ರಹ್ಮಸೂತ್ರಕ್ಕೆ ಭಾಷ್ಯ ಬರೆಯಲು ಕಾಶ್ಮೀರಕ್ಕೆ ಹೋಗಿ " ಬೋಧಾಯನ ವೃತ್ತಿ" ಗ್ರಂಥವನ್ನು ತಂದು "ಶ್ರೀ ಭಾಷ್ಯ" ಎಂಬ ಗ್ರಂಥವನ್ನು ರಚಿಸಿದರು. ಇವರ ಮತತತ್ವ "ವಿಶಿಷ್ಟಾದ್ವೈತ"

ಶ್ರೀ ಮಧ್ವಾಚಾರ್ಯರು ದೇಶದಲೆಲ್ಲಾ ದ್ವೈತ ಮತ ಪ್ರಚಾರ ಮಾಡಿ ಉಡುಪಿ ಕ್ಷೇತ್ರದಲ್ಲಿ ಶ್ರೀ ಕೃಷ್ಣನನ್ನು ಪ್ರತಿಷ್ಠಾಪಿಸಿದರು. ದಾಸ ಸಾಹಿತ್ಯದಲ್ಲಿ ಭಗವಂತನ ಸಂಕೀರ್ತನೆಗಳು ಮನೆ-ಮನೆಗಳಲ್ಲಿ ಪ್ರತಿಧ್ವನಿಸುತ್ತಿವೆ. ಉಡುಪಿಯಲ್ಲಿ 8 ಮಠಗಳನ್ನು ಸ್ಥಾಪಿಸಿದ್ದಾರೆ. ಇಲ್ಲಿಯ ಸಂನ್ಯಾಸಿಗಳು ಈಗಲೂ ದ್ವೈತ ಮತ ಪ್ರಚಾರ ಮಾಡುತ್ತಿದ್ದಾರೆ. ಹೀಗೆ ಮಠಾಧಿಪತಿಗಳು ಮತ್ತು ಸನ್ಯಾಸಿಗಳು ಭಾರತೀಯ ಹಿಂದೂ ಧರ್ಮ ಮತ್ತು ಸಂಸ್ಕೃತಿಯನ್ನು ಅಭಿವೃದ್ಧಿ ಪಡಿಸುತ್ತಿದ್ದಾರೆ.

ಶ್ರೀ ದೇವಿ.